


ಅಪರಂಜಿ

ನಗೆಯ ಕಾರಂಜಿ

- ಆನಂದ್
- ಆರತಿ
- ಶಿವು
- ಬಿ.ಎಸ್. ಚಂದ್ರಶೇಖರ್
- ಹಿರಿಯೂರು ರಾಘವೇಂದ್ರ
- ಮಂ. ಕೇ.
- ಹ. ಶಿ. ಬೈರನಹಟ್ಟಿ
- ಅಪ್ರಸ್ತುತ
- ಕೇಫ
- ಇ.ಡಿ. ನರಹರಿ
- ಅಶ್ವಥ್

ಸಂಪುಟ–೨
ಸಂಚಿಕೆ–೧೧
ಆಗಸ್ಟ್–85

ಬಿಡಿಪ್ರತಿ :
ಕೇವಲ ಒಂದು ರೂಪಾಯಿ

ಅಪರಂಜಿ


ವಾರ್ಷಿಕ ಚಂದಾ : ರೂ. 15-00

ಗೌರವ ಸಲಹೆಗಾರರು :

ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕರು ಮತ್ತು ಪ್ರಕಾಶಕರು :
ಶ್ರೀ ಶಿವಕುಮಾರ್

ಅಪರಂಜಿ ಕಾರ್ಯಾಲಯ
36, 6ನೇ ಮುಖ್ಯ ರಸ್ತೆ
ಮಲ್ಲೇಶ್ವರ, ಬೆಂಗಳೂರು-560 003.



ಈ ಸಂಚಿಕೆಯಲ್ಲಿ … .. ..

ವ್ಯಂಗ್ಯ ಚಿತ್ರಗಳು : ಅಶ್ವಥ್, ಚಂದ್ರು ಮತ್ತು ಮಂಜುನಾಥ್

ಮುದ್ರಣ ; ಇಂಪ್ರೆಷನ್ಸ್. ಮಲ್ಲೇಶ್ವರಂ,
ದೂರವಾಣಿ : 36 29 89
36 34 44



ಸಂಪುಟ—೨ ಆಗಸ್ಟ್ ೧೯೮೫ ಸಂಚಿಕೆ—೧೧

ರಸಗಳಲ್ಲಿ ರಸತಮವಾದುದು, ಹೆಜ್ಜಿನದು

—ಛಾಂದೋಗ

ಅದು ಯಾವುದು ಎಂದು ಯೋಚಿಸಬೇಕಾಗಿಯೇ ಇಲ್ಲ. ಹೈಬ್ರಿಡ್ ಬೆಳೆ ವಿಲಾಯ್ತಿಮರಗಳು (ನೀಲಗಿರಿಯೆಂಬ ವಿಷವೃಕ್ಷ ಎನ್ನುವುದು ಸರಿಯೇ?) ಕೃತಕಗೊಬ್ಬರ ಕಾರ್ಖಾನೆಗಳ ಸ್ಲ್ಯಾಗ್ ಸೇರಿದ ನದಿ ನೀರು, ವಿಷಾನಿಲ ವಿಕಿರಣ ಪೂರಿತಗಾಳಿಗಳೆಲ್ಲಾ ಸೇರಿ ಇನ್ನೆಲ್ಲಿಯ ರಸ?

ಆದ್ದರಿಂದ ಪಾಪ್‌ಸಂಗೀತ. ಡಿಸ್ಕೋ ಬಟ್ಟೆ. ಚಪ್ಪಲಿ ಮತ್ತು ನೃತ್ಯ ಇವುಗಳೇ ನಮ್ಮ ಸಂಸ್ಕೃತಿಯೆಂದು ನಂಬಿದ ಯುವ ಪೀಳಿಗೆ, ಗೊಣಗುಗಳಿಂದ ತುಂಬಿದ ಮಧ್ಯ ಮತ್ತು ಅಪರ ವಯಸ್ಕರು, . ಇವುಗಳಿಂದ ತುಂಬಿದ ನಮ್ಮ ನಾಡು **Take off**ಗೆ ಸಿದ್ಧವಾಗಲೇ ಬೇಕಾಗಿದೆ.

ಈ ಟೇಕ್ ಆಫ್‌ಗೆ ರಸತಮವಾದದ್ದು ನೀವೆಲ್ಲಾ ಊಹಿಸಿದಂತೆ ಹಣ. ರೊಕ್ಕ ಕೇಂದ್ರಕ್ಕೆ ವಿದೇಶೀ ಸಾಲ, ರಾಜ್ಯಕ್ಕೆ ಮಧ್ಯಮಾವಧಿಸಾಲ, ನಮಗೆ? ನಿಮಗೆ? ಪರನೆಂಬ ದೈವ ನಮಗುಂಟು ನಮಗಿಂತ ಸಿರಿವಂತರಾರು. ಜೈ ಭಾರತ. ಜೈ ಜಗತ್.

ಅಪರಂಜಿ ಕಿಡಿ

—ಆನಂದ್

ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳು; ಅಮೇರಿಕದಲ್ಲಿ ರಾಜೀವ್–ರೇಗನ್ ಮಾತುಕತೆ

—ಸುದ್ದಿ

ಅರ್ಥವಾಯಿತು, ರಾಜೀವ್–ಮಾತು. ರೇಗನ್–ಕತೆ!

* * * *

ನೂತನ ಮೆಡಿಕಲ್ ಕಾಲೇಜುಗಳ ಬಗ್ಗೆ ಇನ್ನೂ ನಿರ್ಧಾರ ಇಲ್ಲ

—ಶ್ರೀ ಹೆಗಡೆ

ಓಹೋ, ಈ ಖಾಯಿಲೆ ಮರುಕಳಿಸಿದಂತಿದೆ!

* * * * *

"ಸಚಿವರ ಕಾರಿನಲ್ಲಿ ಕೋಳಿ ಮೊಟ್ಟೆಗಳು; ಪ್ರಕರಣದ ತನಿಖೆ"

"ಕೋಳಿ ಮೊಟ್ಟೆ ಬೆಲೆ ರಕ್ಷಣೆಗೆ ಮುಂದಲಿ"

ಒಂದೇ ದಿನದ ಪತ್ರಿಕೆಯಲ್ಲಿ ಸುದ್ದಿಗಳು!

* * * * *

ಅನಧಿಕೃತ ಕಟ್ಟಡಗಳ ಬಗ್ಗೆ ವಿವಾದ.

"ಅಧಿಕಾರಿಗಳ ಕೈ ಬಲಪಡಿಸೋಣ"

—ಮೇಯರ್

ಅವರ ಕೈಗಳು ಬಿಡುವಾಗಿ ಸಿಕ್ಕಬೇಕಲ್ಲ?

* * * * *

'ಐದು ದಿನದ ವಾರ'ದ ಬಗ್ಗೆ ನಿಮ್ಮ ಟೀಕೆ ಕಾಣಲಿಲ್ಲವೆ? ಅಂತ ಓದುಗರೊಬ್ಬರು ಬರೆದಿದ್ದಾರೆ

ಮಲಗಿದ್ದ ಸೋಮಾರಿಗಳಿಗೆ ಶಾಲು ಹೊದ್ದಿಸಿದಂತಾಯಿತು.

* * * * *

ವಿಧಾನ ಸೌಧದ ಬಳಿ ಹೊಸದಾಗಿ ಸ್ಥಾಪಿಸಲಾದ ಪ್ರತಿಮೆ ಯಾರದ್ದೆಂದು ಖಚಿತ ಪಡಿಸಲು ತನಿಖೆ ನಡೆಸುತ್ತಾರೆ ಎಂಬುದು ಶುದ್ಧ ಕುಹಕ!

ಸಿಕ್ಕೋ ಕೋಕ್; ಮಿತವ್ಯಯದ ಅಡಿಗೆಗೆ ಉಪಯೋಗಿಸಿ

—ಜಾಹೀರಾತು

ಅದೂ ಸಿಗದಿದ್ದರೆ?


ನಂ.ಕ್ಲಬ್ಬಿನಲ್ಲಿ

ಚಂದ್ರು ಹರಳೆಣ್ಣೆ ಮುಖ ಮಾಡ್ಕೊಂಡು ಕೂತಿದ್ದ ಬಾರಲ್ಲಿ. ಏನೋ ಮಗು ಅಂದೆ. "ನೋಡು. ಹಲವಾರು ದಿನದಿಂದ ಎಲ್ಲೆಲ್ಲಿ ನೋಡಿದ್ರೂ ರಾಜೀವ್‌ಗಾಂಧೀನೇ! ರೇಡಿಯೋ, ಪೇಪರ್, ಟಿವಿ ಎಲ್ಲಾ ರಾಜೀವ್‌ಮಯ ಬೇಜಾರಾಗಿ ಸಂಜೆ ಮನೆಗೆ ಹೋಗಿ ಕೂತೆ ಟೀವಿ ಹಾಕಬಾರದು ಅಂತ ನಿರ್ಧರಿಸಿದೆ. ನನ್ನ ಮಗಳು ಶೋಭಾ ಸಂಗೀತ ಪಾಠಕ್ಕೆ ಕೂತಳು. ಅವಳ ಸಂಗೀತದ ಮೇಷ್ಟರು ಶುರು ಮಾಡಿದರು. ಇವತ್ತಾದ್ರೂ ಇವರ ಸಂಗೀತ ಕೇಳೋಣ, ಇಂಪಾಗಿರತ್ತೆ ಅಂತ ಕಿವಿ ಅಗಲಿಸಿ ಕೂತೆ. ಪಾಠ ಶುರು ಆಯ್ತು 'ರಾ ರಾ, ರಾಜೀವ ಲೋಚನಾ!!' ಸರ್ರನೆ ಎದ್ದು ಇಲ್ಲಿಗೆ ಬಂದೆ. ಪಾಪ ಮೇಷ್ಟರು ಏನಂತ ಅಂದುಕೊಂಡ್ರೋ! ಸಧ್ಯ ನಂ ಕ್ಲಬ್ ಬಾರಲ್ಲಿ ಟೀವಿ ಇಲ್ಲ!

ಕುಹಕ ಚಕ್ರಬಂಧ

ಆರತಿ

ಎಲ್ಲ ಪತ್ರಿಕೆಗಳಂತೆ, ಅಪರಂಜಿಯೂ ಚಕ್ರಬಂಧವನ್ನು ನೀಡಿದ್ದಾಳೆ. ನಿಮ್ಮ ಕುಹಕ ಮನೋಭಾವದ ಒರೆಯಲ್ಲಿ ಇಲ್ಲಿನ ಕ್ಲೂಗಳನ್ನು ತೀಡಿ, ಪದಗಳನ್ನು ಹುಡುಕಿ. ಸರಿ ಉತ್ತರ 24ನೆಯ ಪುಟದಲ್ಲಿ.



ಅಡ್ಡ

1. ಈ ಅವಸ್ಥೆಯಲ್ಲಿ ಒಂದೇ ಗುರಿ

2. ಜಾಮಾತಾ ದಶಮಗ್ರಹವಾದರೆ, ಅಳಿಯನ ಜೊತೆಗಿನ ಗಿಳಿಯ ?

4. ನೀರಿನ ಕ್ಷಾಮ, ವಿದ್ಯುದಭಾವ, ಸೀಟ್ ಪರದಾಟ, ಟೆರರಿಸಂ, ಎಲ್ಲವನ್ನೂ ಒಮ್ಮೆಲೇ ಮರೆಯಲು ಸುಲಭ ಸಾಧನ !

5. ಆಡಳಿತ ಯಂತ್ರವನ್ನು ಸರಾಗಗೊಳಿಸುವ ಕೀಲೆಣ್ಣೆ

7. ಮಂತ್ರಿಗಳ ಅತಿ ಮೆಚ್ಚಿನ ಉತ್ತರ (ಕಾಮರಾಜ್ ಛಾಯೆ ?)

8. ನಮ್ಮ ಸುಂಕದ ಅಧಿಕಾರಿಗಳ ಹೃದಯ ಈ ವಸ್ತುವಿನಿಂದ ಮಾಡಲ್ಪಟ್ಟಿದೆ ಎಂದು ಕೆಲವರ ಬಲವಾದ ನಂಬಿಕೆ.

11. ಅಪರಂಜಿ ಓದುಗ

13. ಈಗಿನ ಕಾಲದಲ್ಲಿ ಜೀವನ ಸಾಗಿಸಬೇಕಾದರೆ, ಇದನ್ನು ಮಾಡಬೇಕಾಗುತ್ತೆ

15. ನಮ್ಮ ಸಂವೇದನಾ ಶೀಲತೆಯ ಸ್ಥಿತಿ

16. ಒಂದೇ ಪಕ್ಷದ ಇಬ್ಬರು ಪುಡಾರಿಗಳ ನಡುವೆ ನಡೆಯುವ ಒಂದು ಕ್ರೀಡೆ:

17. ಮೇಲಿನ ಕ್ರೀಡೆಯಲ್ಲಿ ಗೆದ್ದವನ್ನು ಈ ಪದವಿಗೆ ಅರ್ಹ

ಉದ್ದ

1. ಈ ಕಲಿಯುಗದಲ್ಲಿ ಈ ತಳಿ ಎಕ್ಸಿಟಿಂಗ್ಟ ಎನ್ನಬಹುದೇನೋ !

3. ಬೆಂಗಳೂರಿನ ಜಲಮಂಡಲಿಗೆ ಇದು ಹಿಡಿದಿರಬೇಕೆಂದು ಕೆಲವರ ಅನಿಸಿಕೆ.

4. ಇದರಲ್ಲಿದ್ದೂ ಗೋವಿಂದ ಎನ್ನದಿದ್ದರೆ, ಗಾದೆಗೆ ಅಪಚಾರವಾದಂತೆ

9. ಭಾರತೀಯರ ವರ್ಕ್ ಎಥಿಕ್‌ನ ಮೂಲಧ್ಯೇಯ

10. ದೇವತೆಗಳು, ಮಾನವರ ಸುಖ ಭೋಗಗಳನ್ನು ನೋಡಿ ಉಂಟಾಗುವ ಹೊಟ್ಟೆಯುರಿಯನ್ನು ತಂಪು ಗೊಳಿಸುವ ಪಾನೀಯ

12. ಸತ್ಯಕ್ಕೆ ವಿವಿಧ ರೂಪ ಕೊಡಬಲ್ಲ ಚಾಣಾಕ್ಷ ವೃತ್ತಿನಿರತ

14. ಇದನ್ನು ಉರುಳಿಸಿ ನಮ್ಮ ಆಯವ್ಯಯ ಪಟ್ಟಿಯ ಡಿಫಿಸಿಟ್‌ನ್ನು ನಿರ್ಧರಿಸುತ್ತಾರಂತೆ.

ಇಪ್ಪತ್ತೊಂದನೆಯ ಶತಮಾನ! ಇಗೋ ನಾ ಬಂದೆ

—ಶಿವು

ನಮ್ಮ ಹುಡುಗನ ಹೈಸ್ಕೂಲ್ ಸೀಟಿಗೆ ಬೆಳಗಿನಿಂದ ಅಲೆದೂ, ಅಲೆದೂ, ಸುಸ್ತಾಗಿತ್ತು. ಯಾವ ಖಾಸಗೀ ಶಾಲೆಗೆ ಹೋದ್ರೂ ಸೀಟ್ ಇಲ್ಲಿ, ಅಪ್ಲಿಕೇಷನ್ ಕೊಡೋಕ್ಕೂ ತಕರಾರು. ನಾಳೆ ಬನ್ನಿ, ಪ್ರಿಂಟಾಗಿಲ್ಲ, ಇತ್ಯಾದಿ ಸಬೂಬುಗಳು. ಕೊನೆಗೆ ಏನೂ ತೋಚದೆ ಸಚ್ಚೀನಾದ್ರೂ ಕೇಳೋಣ, ಯಾರಿಗಾದ್ರೂ ಹೇಳಿ, ಏನಾದ್ರೂ ಮಾಡಬಹುದು ಅಂತ ಅವನಿಗೆ ಫೋನ್ ಮಾಡಿದೆ. ಸಾಯಂಕಾಲ ಕ್ಲಬ್ಬಿಗೆ ಬಾ ಮಾತಾಡೋಣ ಅಂದ.

ಸಂಜೆ ಕ್ಲಬ್ಬಿನಲ್ಲಿ ಕುಳಿತಿದ್ದೆವು. ಬೆಳಗಿನಿಂದ ಸುಸ್ತು, ನಿರಾಶೆ. ನಾನೂ ವಿಷಿಯಸ್ ಮೂಡಿನಲ್ಲಿದ್ದೆ.

"ಏನೋ ಸಚ್ಚಿ, ಇದೆಂಥ ಎಜುಕೇಷನ್ ಸಿಸ್ಟಮ್ಮು, ವಿದ್ಯಾಭ್ಯಾಸ ಪ್ರತಿಯೊಬ್ಬ ಪ್ರಜೆಯ ಹಕ್ಕು ಅಂತ ಎಲ್ಲ ಧುರೀಣರೂ ಹೇಳಿದ್ದೆ ಹೇಳಿದ್ದು. ಇದಕ್ಕೆ ಸಾವಿರಾರು ಅಡ್ಡಿ ಆತಂಕ. ಹಾಗೂ ಹೀಗೂ ಸೀಟ್ ಗಿಟ್ಟಿಸಿದರೂ, ಪಠ್ಯ ಪುಸ್ತಕಗಳಿಗೆ ಪರದಾಟ, ಪರೀಕ್ಷೆ ಸಮಯ ಬಂದ್ರೆ, ಪ್ರಶ್ನೆ ಪತ್ರಿಕೆ ಲೀಕು. ಪಾಸಾದರೆ ತಿರುಗೀ ಕಾಲೇಜ್ ಸೀಟಿಗೆ ಭಗೀರಥ ಪ್ರಯತ್ನ. ಎಲ್ಲಿ ನೋಡು ಇದೇ ಗೋಳು. ಮೊನ್ನೆ ಬಟ್ಟೆ ಒಗೆಯೋವಾಗ ನೀರು ಪಕ್ಕದ್ಮನೇಗೆ ಹಾರದಿರಲೀ ಅಂತ ಮನೆ ಹಿಂದಿನ ಗೋಡೇನ ನಾಲ್ಕು ಅಡಿ ಎತ್ತರಿಸಬೇಕಾಯ್ತು. ಒಂದು ಗಾಡಿ ಇಟ್ಟಿಗೆ ತರಿಸ್ದೆ. ಪ್ರತ್ಯಕ್ಷನಾದ ನೋಡು ಕಾರ್ಪೊರೇಷನ್ ಇನ್ಸ್ಪೆಕ್ಟರ್ ಪ್ಲಾನ್ ಎಲ್ಲಿ, ಸ್ಯಾಂಕ್ಷನ್ ಇದೆಯಾ, ಇರೋ ಗೋಡೇನ ಕೆಡವಿಸಿ ಬಿಡ್ತೀನೆ ಅಂತೆಲ್ಲಾ ಹಾರಾಡಿದ. ಸರೀನಪ್ಪ ಪ್ಲಾನ್ ಬರಿಸಿ ಸ್ಯಾಂಕ್ಷನ್ ತೊಗೋತೀನಿ ಅಂದೆ. ಅವನು ಬಿಡಬೇಕಲ್ಲ. ನೀವು ಸ್ಯಾಂಕ್ಷನ್ ತೊಗೊಳ್ಳೊದಕ್ಕೆ ಆಗೋ ಖರ್ಚಿನಲ್ಲಿ ಒಂದು ಅಂಶ ನನಗೇ ಕೊಡಿಸಾರ್. ಖರ್ಚೂ ಕಡಿಮೆ ಆಗೋದರ ಜೊತೆಗೆ ಕೆಲಸ ಸುಸೂತ್ರವಾಗಿ ಆಗುತ್ತೆ ಅಂತ ಬುದ್ಧಿ ಹೇಳಿದ. ಹಾಳಾಗಿ ಹೋಗಲಿ ಅಂತ ಹಣ ತೆತ್ತೆ. ಈ ಕರಪ್ಷನ್, ಟೆರರಿಸಂ, ಎಲ್ಲಾ ನೋಡಿದರೆ, ಇಪ್ಪತ್ತೊಂದನೆಯ ಶತಮಾನದ ಹೊತ್ತಿಗೆ ದೇಶಾನೇ ಇರುತ್ತೊ ಅಂತ ಅನ್ನಿಸ್ತಿದೆ"

ಸಚ್ಚಿ ಎರಡು ನಿಮಿಷ ಸುಮ್ಮನಿದ್ದ. ಖಾಲಿಯಾಗಿದ್ದ ಗ್ಲಾಸಿನಲ್ಲಿ ಫಿಲ್ಡ್ ಬೀರನ್ನು ನೊರೆ ಬರದ ಹಾಗೆ ನವಿರಾಗಿ ಸುರಿದು ಕೊಂಡು, ಒಂದು ಗುಟುಕು ಹೀರಿ,

ಶುರು ಮಾಡಿದ. "ನೋಡು ಶಿವು. ಯಾವ ಸಮಸ್ಯೆ ತೊಗೊಂಡ್ರೂ ಅದಕ್ಕೆ ಎರಡು ಮುಖ ಇರುತ್ತೆ. ನೀನು ಹೇಳೋ ರೀತಿ ನೋಡಿದ್ರೆ, ಇಷ್ಟು ಹೊತ್ತಿಗಾಗಲೇ ದೇಶದಲ್ಲಿ ಯಾವ ಕೆಲಸಾನೂ ಆಗದೇ ಎಲ್ಲಾ ಸ್ಥಗಿತ ಗೊಂಡಿರಬೇಕಾಗಿತ್ತು. ಹಾಗೇನೂ ಆಗಿಲ್ಲವಲ್ಲ. ನಿಜ ಒಂದು ದೇಶ, ಒಂದು ಜನಾಂಗವಾಗಿ ನಾವು ಇನ್ನೂ ಹೆಚ್ಚು ಪ್ರಗತಿ ಸಾಧಿಸಬಹುದಾಗಿತ್ತು. ಅದಕ್ಕೆ ಮುಖ್ಯವಾಗಿ ಬೇಕಾದದ್ದು, ಮೋಟಿವೇಷನ್. ಚರ್ಚಿಲ್ಲರ ಮುಂದಾಳತ್ವದಲ್ಲಿ ಬ್ರಿಟಿಷರು ಹೋರಾಡಿದರಲ್ಲ ಆ ಮಟ್ಟದ ಮೋಟಿವೇಷನ್. ಅಮೆರಿಕಾದಲ್ಲೂ ಸಹ ಕಮ್ಯೂನಿಜಂ ಭೂತಾನ ಎಲ್ಲರ ಮುಂದೂ ಹಿಡಿದು ಎಲ್ಲರನ್ನೂ ದೇಶಕ್ಕಾಗಿ ಮೋಟಿವೇಟ್ ಮಾಡೋದ್ರಲ್ಲಿ ಯಶಸ್ವಿಯಾದ್ರು. ಸಮತಾ ವಾದವನ್ನು un-american ಅಂದ್ರು. ನಮ್ಮ ದೇಶದಲ್ಲೂ ಸಹ ಯಾವುದಾದರೂ ಒಂದು ಮೋಟಿವೇಟಿಂಗ್ Force ಇದ್ರೆ, ಇಪ್ಪತ್ತೊಂದನೇ ಶತಮಾನಕ್ಕೆ ಒಂದೇ ಜಿಗಿತದಲ್ಲಿ ಸೇರಬಹುದು, ಆದ್ರೆ ಈ Force ಜನರ ಹೃದಯದಾಳದಿಂದ ಬರಬೇಕು. ಗ್ರಾಫ್ಟ್ ಮಾಡುಕ್ಕೆ ಆಗುಲ್ಲ. ಸ್ವಂತ ಉತ್ಸಾಹದಿಂದ, ಈ ಒಂದುಗೂಡಿಸುವ ಶಕ್ತಿ ಎಲ್ಲರೂ ಕೆಲಸ ಮಾಡೋ ಹಾಗೆ ಮಾಡಿದ್ರೆ ದೇಶದ ಎಲ್ಲಾ ಸಮಸ್ಯೆಗಳೂ ತಾನಾಗೇ ಕರಗಿ ಹೋಗುತ್ವೆ".

ಸಚ್ಚಿ ಇನ್ನೊಂದು ಗುಟುಕು ಹೀರಿದ.

"ನಮ್ಮ ದೇಶದ ಇಂದಿನ ಪರಿಸ್ಥಿತಿಯಲ್ಲಿ ಈ ಮೋಟಿವೇಟಿಂಗ್ ಶಕ್ತಿ ಯಾವುದಾಗಬಲ್ಲದು ? " ಸಹಜ ಕುತೂಹಲದಿಂದ ಕೇಳಿದೆ.

"ಲಂಚ. ಲಂಚ ತೊಗೊಳ್ಳೋದನ್ನ ಲೀಗಲೈಸ್ ಮಾಡಬೇಕು. ಆಗ ಅಧಿಕಾರಿಗಳಲ್ಲಿ ಉದ್ಯಮಶೀಲತೆ, ಕಾಂಪಿಟೆಟಿವ್ ಸ್ಪಿರಿಟ್. ಎಲ್ಲಾ ಬರುತ್ತೆ, ಲಂಚ ಎಷ್ಟಾದರೂ ತೊಗೋಬಹುದು. ಕೆಲಸ ಮಾತ್ರ ಬೇಗ ಮಾಡಿಕೊಡಬೇಕು ಅಂತ ಸುಗ್ರೀವಾಜ್ಞೆ ಹೊರಡಿಸಬೇಕು. ಅಧಿಕಾರಿಗಳು ಹೆಚ್ಚು ಟರ್ನೋವರಿಗೋಸ್ಕರ ಕಡಿಮೆ ಲಂಚ ತೊಗೊಂಡು ಹೆಚ್ಚು ಜನರಿಗೆ ಉಪಕಾರ ಮಾಡ್ತಾರೆ. ಪ್ರಾಮಾಣಿಕತೆ un-Indian ಅಂತ ಘೋಷಿಸಿದರೆ ನೋಡು, ಲಂಚಕ್ಕಾಗಿ ಕಾಯುತ್ತಾ ಈಗ ವ್ಯರ್ಥವಾಗುತ್ತಿರೋ ಕಾಲವೆಲ್ಲಾ ಉಳಿತಾಯವಾಗಿ, ಉತ್ಪಾದನೆ ಮೂರುಪಟ್ಟು ಹೆಚ್ಚುತ್ತೆ. ನಮ್ಮ ಪ್ರಧಾನಿಯವರೇ ಹೇಳಿದ ಹಾಗೆ, ಲಂಚ ಸರ್ವಾಂತರ್ಯಾಮಿ. ಕಾಮರೂಪಿ. ಈವರೆಗೂ ದೇಶದಲ್ಲಿ ಏನಾದ್ರೂ ಕೆಲಸಗಳಾಗಿದ್ರೆ, ಅದು ಈ ಲಂಚದ ಸಹಾಯದಿಂದ ಅನ್ನೋ ಮೂಲ ತತ್ವಾನ ಮನವರಿಕೆ ಮಾಡಿಕೊಂಡ್ರೆ ನಾ ಹೇಳಿದ ಮಾರ್ಗ ಅತ್ಯಂತ ಸೂಕ್ತ ಅಂತ ಗೊತ್ತಾಗುತ್ತೆ".

ನನಗೇನೂ ತೋಚಲಿಲ್ಲ.

"ಸರಿ ಈಗ ನನ್ನ ಮಗನ ಸೀಟ್‌ಗೆ ಏನು ಮಾಡಲಿ ಹೇಳು" ಅಂತ ಕೇಳಿದೆ.

"ಆದಕ್ಕೇನೂ ಯೋಚನೆ ಮಾಡಬೇಡ. ಆ ಖಾಸಗೀ ಸ್ಕೂಲಿನ ಇನ್ಸ್‌ಪೆಕ್ಷನ್ ಆಫೀಸರ್‌ನ ಹಿಡಿದು ನಮ್ಮ ಕೆಲ್ಸ ನಡೆಸಿಕೊಳ್ಳೋಣ. ಹೋಮಿಯೋಪತಿ ಸೂತ್ರ ಗೊತ್ತಿಲ್ಲವೇನೋ, ಮುಳ್ಳನ್ನು, ಮುಳ್ಳಿನಿಂದಲೇ ತೆಗೆಯಬೇಕು ಅಂತ".



ನೀರಿನ ಸಮಸ್ಯೆ ಬಂದು ಒಳ್ಳೇದಾಯ್ತಮ್ಮ. ನಿಂತ್ಕೊಂಡು ಮನಸಾರೆ ಮಾತಾಡ್ಬೊದು!

11

ತನ್ನಂತೆ ಪರರ ಬಗೆದೊಡೆ

—ಬಿ.ಎಸ್. ಚಂದ್ರಶೇಖರ್

ಬೇರೆಯವರನ್ನೂ ತನ್ನಂತೆಯೂ ಕಂಡರೆ ಕೈಲಾಸ ಖಾಯಂ ಎಂದ ಆ ಸರ್ವಜ್ಞ ಪಾಪ ಯಾಪತ್ತು ಬೇರೆಯವರ ಮನೆಯಲ್ಲಿ ಊಟಮಾಡಿರಲಿಲ್ಲ ಅಂತ ಕಾಣುತ್ತೆ. ಬೆಚ್ಚನೆಯ ಮ ನೆ ಯ ಲ್ಲಿ ಮೆಚ್ಚಿನಡೆದ ಸತಿ ಮಾಡಿಹಾಕಿದ್ರು ಹೇಗಿದ್ದೀತು ಅಂತ ಊಹೆ ಮಾಡುತ್ತಾ ಆ ಪದ್ಯ ಬರಯುತ್ತಿದ್ದಿರಬೇಕು.

ನನ್ನ ಆಪ್ತಸ್ನೇಹಿತನನ್ನು ಈಚೆಗೆ ಮದುವೆಯಾದ ಸುಶೀಲ ನನ್ನ ದೂರದ ಸಂಬಂಧಿ. ತನ್ನ ತಳ್ಳನೆಯ ದೇಹ ಅದೇ ಆಕಾರದಲ್ಲಿ ಉಳಿಯಬೇಕು ಎಂದು ಪ್ರತಿಯೊಂದು ಗುಕ್ಕನ್ನೂ ತೂಕಮಾಡಿ ತಿನ್ನುವವಳು. ಜೊತೆಗೆ ಹೊಂಸ್ಸೈನ್ಸ್ ಪದವೀಧರೆ. ಯಾವ ಆಹಾರದಲ್ಲಿ ಎಷ್ಟು ಕ್ಯಾಲರಿಯಿರುತ್ತದೆ ಎನ್ನುವುದನ್ನು ಪರೀಕ್ಷೆಗಾಗಿ ಉರು ಹೊಡೆದಿರುವಳು. ಈಚೆಗೆ ನೈಸರ್ಗಿಕ ಆಹಾರ ಪಂಥದ ಪೂಜಾರಿಣಿ ಬೇರೆ ಆಗಿದ್ದಾಳೆ. ಬೆಂಕಿ ಕಂಡು ಹಿಡಿದದ್ದೆ ಮಾನವನ ಮೊದಲ ತಪ್ಪು, ಪ್ರಕೃತಿಯಲ್ಲಿ ಸಿದ್ಧರೂಪದಲ್ಲಿ ಸಿಗುವ ಹಣ್ಣು ತರಕಾರಿ ಅದು ಇದ್ದ ಹಾಗೇ ತಿಂದರೆ ಯಾವ ಖಾಹಿಲೆನೂ ಬರುವುದಿಲ್ಲ ಎಂದು ಗಂಟೆ ಗಂಟೆ ವಾದ ಮಾಡುತ್ತಾಳಂತೆ ಹೀಗಾಗಿ ಈಗ ಅವಳು ಒಂದು ರೀತಿಯಲ್ಲಿ ಕೋತಿ ಹೆಂಡ ಕುಡಿದಿದ್ದಾಗ ಚೇಳು ಕಚ್ಚಿದ ಪ್ರಸಂಗವನ್ನು ಜ್ಞಾಪಕಕ್ಕೆ ತರಿಸುತ್ತಾಳೆ.

ಮದುವೆಯಾದ ಮೇಲೆ ಒಂದು ದಿನವಾದರೂ ನನ್ನನ್ನು ಊಟಕ್ಕೆ ಕರೆದಿಲ್ಲ ಎನ್ನುವುದು ನನ್ನ ಸ್ನೇಹಿತನಿಗೆ ಮುಜುಗರದ ವಿಷಯ. ಆದರೆ ತನ್ನ ಹೆಂಡತಿಯ ಅಡಿಗೆ ಊಟಮಾಡಿದವರು ಮುಂದೆಯೂ ಸ್ನೇಹಿತರಾಗಿಯೇ ಉಳಿಯಲು ಸಾಧ್ಯವೇ ಎನ್ನುವ ನ್ಯಾಯವಾದ ಅನುಮಾನ. ಹೀಗಾಗಿ ನಾನು ಸಿಕ್ಕಾಗಲೆಲ್ಲಾ ಮನೆಗೆ ಬಾ ಎಂದು ಅರೆಮನಸ್ಸಿನಿಂದ ಕರೆಯುತ್ತಿದ್ದ. ನಾನೂ ಏನಾದರೂ ನೆಪಹೇಳಿ ತಪ್ಪಿಸಿಕೊಂಡು ಬರುತ್ತಿದ್ದೆ. ಆದರೆ ಮೊನ್ನೆ ಅನಿವಾರ್ಯವಾಗಿ ಅವರ ಆತಿಥ್ಯ ಸ್ವೀಕರಿಸಲೇಬೇಕಾಯಿತು.

ಸುಶೀಲ ಬಹಳ ಮುತುವರ್ಜಿಯಿಂದ ಅಡಿಗೆ ಮಾಡಿದ್ದಳು ಅಂತ ಕಾಣುತ್ತೆ. ಅಡಿಗೆ ಮಾಡುವುದಕ್ಕಿಂತ ಮಾಡಿದ ಅಡಿಗೆಯನ್ನು ಟೇಬಲ್ ಮೇಲೆ ಅಂದವಾಗಿ

ಪುವುದಕ್ಕೆ ಪೆಚ್ಚು ಶ್ರಮ ಪಟ್ಟಿದ್ದಳೇನೊ. ಮಹಿಳೆಯರ ಪತ್ರಿಕೆಯಲ್ಲಿ ಬಣ್ಣ ಬಣ್ಣ ಚಿತ್ರದಲ್ಲಿ ಪ್ರಕಟಿಸುವಂತಹ ಜೋಡಣೆ–ಕಣ್ಣಿಗೆ ಹಬ್ಬ. ಪಾಪ ಸುಶೀಲನಿಗೆ ಊಟವನನ್ನು ಮೆಚ್ಚಬೇಕಾದುದು ಕಣ್ಣಲ್ಲ, ನಾಲಿಗೆ ಅಂತ ಗೊತ್ತಿಲ್ಲ.

ನಾನೇನಾದರೂ ಒಂದು ಮೊಲವಾಗಿದ್ದಿದ್ದರೆ–ಅದೂ ಡಯಟ್ ಮಾಡುತ್ತಿರುವ ಪುಟಾಣಿ ಮೊಲವಾಗಿದ್ದರೆ, ಅಂದಿನ ಅಡಿಗೆ ಎಲ್ಲಾ ತುಂಬಾ ಖುಷಿಯಾಗುತ್ತಿತ್ತು ಅಂತ ಕಾಣುತ್ತೆ, ಏಕೆಂದರೆ ಅಂದಿನ ಅಡಿಗೆಯಲ್ಲಿ ಪೂರ್ತಿ ಕ್ಯಾರೆಟ್ ಮೋಟಿಫ್ (carrot motiff) ಮುಂಚೆ ಕುಡಿಯಲು ಕ್ಯಾರೆಟ್ ರಸ–ಸಮಾರು 30 ಮಿಲಿ ಲೀಟರ್, ಟೆಸ್ಟ್‌ಟ್ಯೂಬ್ ಆಕಾರದ ಅಲಂಕಾರದ ಉದ್ದಗಾಜಿನ ಲೋಟದಲ್ಲಿ (ಈಗ ಕುಯ್ದ ಕ್ಯಾರೆಟ್‌ನಿಂದ ಆಗ ತೆಗೆದ ಸ್ವಾಭಾವಿಕ ರಸ–ಅದಕ್ಕೆ ಸಕ್ಕರೆ ಹಾಕಿದರೆ ಡಯಾಬಿಟೀಸ್ ಬರಬಹುದು), ಒಗ್ಗರಣೆ ತೆಂಗಿನಕಾಯಿ ಇಲ್ಲದ ಕ್ಯಾರೆಟ್ ಕೋಸಬಂರಿ (ಎಣ್ಣೆ ಒಗ್ಗರಣೆ ಹೃದಯಕ್ಕೊಳ್ಳೆದಲ್ಲ, ತೆಂಗಿನ ಕಾಯಿಯಲ್ಲಿ ಕೊಲೆಸ್ಟರಲ್ ಹೆಚ್ಚು) ಕ್ಯಾರಟ್ ಸಸ್ರ ಉಪ್ಪಿನಕಾಯಿ (ಖಾರ ಕರುಳಿಗೆ ಒಳ್ಳೆಯದಲ್ಲ, ಹುಳಿ ಅಸಿಡಿಟಿ ಹೆಚ್ಚಿಸುತ್ತದೆ) ಮೊಳಕೆಬಂದ ಹೆಸರು ಕಾಳಿನ ಪಲ್ಯ (?) (ಬೇಯಿಸಿದರೆ ವೈಟಮಿನ್ ನಷ್ಟವಾಗುತ್ತದೆ, ಉಪ್ಪು ಹೃದಯಕ್ಕೊಳ್ಳೆಯದಲ್ಲ, ಒಗ್ಗರಣೆ, ತೆಂಗಿನತುರಿ ಮೇಲಿನಂತೆ) ಜೊತೆಗೆ ಕ್ಯಾರಟ್ ಕೆಂಪನ್ನು ಕಾಂಟ್ರಾಸ್ಟ್ ಮಾಡಲು ಹಸಿರು ಚಟ್ನಿ–ಹೀರೇಕಾಯಿಸಿಪ್ಪೆಯಿಂದ ಮಾಡಿದು–ಆ ಸಿಪ್ಪೆಯಲ್ಲಿ ಎಂತಹುದೋ ಮಿನರಲ್ ಸಾಲ್ಟ್ ಇರುತ್ತದಂತೆ ಸಿಪ್ಪೆ ತೆಗೆದು ಉಳಿದ ಹೀರೆಕಾಯಿನಲ್ಲಿ ಬೋಂಡಾ ಮಾಡಿರಬಹುದೇನೋ ಎಂದು ಒಂದು ಕ್ಷಣ ಆಸೆ ಹುಟ್ಟಿತು. ಆದರೆ ಸುಶೀಲನ ಪ್ರಕಾರ ಹೀರೆಕಾಯಿ ಒಳಗೆ ಇನ್ನೆಂತಹುದೋ ಟಾಕ್ಸಿನ್ ಇರುತ್ತದಂತೆ. ಜಾಣೆ ಸುಶೀಲ ಸಿಪ್ಪೆಮಾತ್ರ ತಾನಿಟ್ಟುಕೊಂಡು ಉಳಿದ ಹೀರೇಕಾಯಿ ಮನೆ ಕೆಲಸ ಮಾಡುವವಳಿಗೆ ಕೊಡುತ್ತಾಳೆ.

ಇವುಗಳು ಸೈಡ್ ಡಿಶ್‌ಗಳಾದರೆ ಮುಖ್ಯ ಅಡಿಗೆ ಗಂಜಿಬಸಿಯದ, ಪಾಲಿಷ್ ಇಲ್ಲದ ಕೆಂಪಕ್ಕಿ ಅನ್ನ. ಉಪ್ಪು, ಹುಳಿ ಖಾರ ಇಲ್ಲದ ಬೇಳೆ ತರಕಾರಿ ಬೇಯಿಸಿದ ತೊವ್ವೆ. ಸುಶೀಲ ತನ್ನ 35 ಕೆಜಿ ತೂಕದ ದೇಹಕ್ಕೆ ಬೇಕಾಗುವಷ್ಟೇ ಆಹಾರ ಬೇರೆಯವರಿಗೂ ಸಾಕು ಎಂದು ನಿರ್ಧರಿಸಿದಂತಿತ್ತು. ಅನ್ನ ಬಡಿಸಲು ಟೀ ಚಮಚ ಎಂಟು ಬಾರಿ ಅನ್ನ ಬಿದ್ದಮೇಲೂ ಸಾಕು ಅನ್ನದೆ ಇರಲು ಹೇಗೆ ಸಾಧ್ಯ? ಊಟ ಮುಗಿಸಿ ಹೊರಗಡೆ ಮಾತನಾಡಲು ಕುಳಿತಕೂಡಲೇ ನನಗೆ ಭಯಂಕರ ಹಸಿವು, ರಸ್ತೆಬದಿಯ ಹೋಟೆಲ್‌ಗಳು ಮಧ್ಯರಾತ್ರಿವರೆಗೂ ತಿಂಡಿ ಮಾರುವುದರಿಂದ ಅಂದು ರಾತ್ರಿ ನಿದ್ದೆಮಾಡಲು ಸಾಧ್ಯವಾಯಿತು.

ಸುಶೀಲ ನಂತವರು ಜಿಡ್ಡಿಲ್ಲದ, ಕಡಿಮೆ ಪ್ರೋಟಿನ್, ಕಡಿಮೆ ಶರ್ಕರಪಿಷ್ಟ, ಹೆಚ್ಚು ವೈಟಮಿನ್‌ಗಳಿರುವ ಸ್ವಾಭಾವಿಕ ನಾರು–ಬೇರುಗಳನ್ನು ಬೇಯಿಸದೆ ತಿನ್ನ ಬಯಸಿದರೆ ನನ್ನ ಯಾವ ಆಕ್ಷೇಪಣೆಯೂ ಇಲ್ಲ. ಆದರೆ ಸರ್ವಜ್ಞನ ಮಾತು ಕೇಳಿಕೊಂಡು ಬೇರೆಯವರಿಗೂ ಇದೇ ಇಷ್ಟವಾಗುತ್ತದೆ ಎಂದು ತಿಳಿದುಕೊಳ್ಳುವುದು ಮಾತ್ರ ನನಗೆ ಇಷ್ಟವಾಗುವುದಿಲ್ಲ.


ಇದಕ್ಕೆ ವಿರುದ್ಧವಾದ ಅನುಭವ ಈಗ ಕೆಲವು ತಿಂಗಳ ಹಿಂದೆ ನನ್ನ ಇನ್ನೊಬ್ಬ ಸ್ನೇಹಿತ ಭೀಮರಾವ್ ಊರಿಗೆ ಹೋದಾಗ ಆಗಿತ್ತು. ಭೀಮುನನ್ನು ನಾನು ನೋಡಿ ತುಂಬಾದಿನವಾಗಿತ್ತು. ಆಗ ಅವನಿಗೆ ಒಂದೇಗಲ್ಲ, ಒಂದು ಮೀಡಿಯಂ ಸೈಜ್ ಹೊಟ್ಟೆ ಇತ್ತು ಅಂತ ಜ್ಞಾಪಕ. ಈಗ ಅವನನ್ನು ನೋಡಿದಾಗ ಸುಮಾರು ಆರುಗಲ್ಲಗಳಿವೆ ಹೊಟ್ಟೆ ವಿಚಾರ ನಾನೇನು ಹೇಳಿದರೂ ಅಸಭ್ಯತೆ ಎನಿಸುತ್ತದೆ. ಅವನೇ ತಮಾಷೆ ಮಾಡಿಕೊಳ್ಳುವಂತೆ, ಅವನೇನಾದರೊ ರಸ್ತೇಲಿ ಷೂ ಪಾಲಿಶ್ ಮಾಡಿಕೊಂಡರೆ, ಆ ಪಾಲಿಶ್ ಹುಡುಗ ಚೆನ್ನಾಗಿ ಮಾಡಿದ್ದಾನೆ ಎನ್ನುವುದನ್ನೇ ನಂಬದೇ ವಿಧಿಯಿಲ್ಲ. ಅವನಿಗಂತು ಅವನ ಕಾಲು ಕಾಣಿಸುವುದು ಸಾಧ್ಯವೇ ಇಲ್ಲ. ಭೀಮು ಹೆಂಡತಿ ಅನೂರೂಪ ಜೋಡಿ ಸಿಗರೇಟ್ ಕಂಪನಿಯವರು ಹೇಳುವಂತೆ ಒಬ್ಬರಿಗಾಗಿ ಇನ್ನೊಬ್ಬರನ್ನು ಮಾಡಿರುವಂತಹ ಜೊತೆ.

ನನಗಾಗಿ ಭೀಮುವಿನ ಮನೆಯಲ್ಲಿ ವಿಶೇಷ ಅಡಿಗೆ ಒಳಗಿನಿಂದ ಬರುತ್ತಿರುವ ವಾಸನೆಗಳಿಗೇ ಬಾಯಲ್ಲಿ ನೀರು ಸುರಿಯುತ್ತಿತ್ತು. ಊಟಕ್ಕೆ ದೊಡ್ಡ ಸೈಜಿನ ಅಗ್ರದ ಬಾಳೆಎಲೆ. ಭೀಮುವಿನ ಜೊತೆ ಏನೋ ಮಾತನಾಡುತ್ತಿದ್ದ ಕ್ಷಣವಲ್ಲಿ ಎಲೆಯ ಮೇಲೆ ಅನ್ನ ಬಿದ್ದಿತ್ತು. ನೋಡಿ ಒಂದು ಕ್ಷಣ ಜ್ಞಾನ ತಪ್ಪುವ ಹಾಗಾಯಿತು. ನಮ್ಮೂರ ತೇರಿನಲ್ಲಿ ರಾಕ್ಷಸಗಣಗಳಿಗೆ ಬಲಿಹಾಕುವ ಒಂದು ಸಂಪ್ರದಾಯವಿದೆ. ಅಲ್ಲಿ ಮಾತ್ರ ಇಷ್ಟೆತ್ತರದ ಅನ್ನದ ಗುಡ್ಡವನ್ನು ನೋಡಿದ್ದೆ ಎಲ್ಲರ ಮನೆಯಲ್ಲೂ ಅನ್ನ ಹಾಕಲು ಸ್ಟೀಲ್ ಕೈ ಬಳಸಿದರೆ ಇವರ ಮನೆಯಲ್ಲಿ ಲಾಡು ತಟ್ಟೆಯಿಂದ ಎಲೆಗೆ ಅನ್ನ ತೋಡುತ್ತಾರೆ.

ಈ ರಾಶಿ ಅನ್ನವನ್ನು ಖರ್ಚುಮಾಡದೇ ವಿಧಿಯಿಲ್ಲ. ಅನ್ನ ಹುಳಿ, ಅನ್ನ–ಸಾರು, ಅನ್ನ–ಪಲ್ಯ, ಅನ್ನ–ಗೊಜ್ಜು, ಅನ್ನ–ಚಟ್ನಿ ತಿಂದರೂ ಇನ್ನೂ ಮಜ್ಜಿಗೆಗೆ ಅನ್ನ ಉಳಿದಿದೆ. ಈ ಮಧ್ಯೆ ನನಗಾಗಿ ವಿಶೇಷವಾಗಿ ಮಾಡಿದ್ದ ಚಿತ್ರಾನ್ನ, ಆಬೊಂಡೆ, ಹಾಲುಬಾಯಿ, ಶಾವಿಗೆ ಪಾಯಸ ಬೇಡ ಎನ್ನಬೇಕಾದ ಸಂಕಟ, ಭೀಮು ಮಾತ್ರ ಮಾಡಿದ ಅಡಿಗೆಗೆ ಅನ್ಯಾಯಮಾಡಲಿಲ್ಲ. ಭೀಮು

ಹೆಂಡತೀದೂ ಏನೂ ತಪ್ಪಿಲ್ಲ. ಆಕೆ ನನ್ನನ್ನೂ, ತನ್ನಂತೆ ಅಥವ ತನ್ನ ಗಂಡನಂತೆ ತಿಳಿದಿರಬೇಕು. ಮೂರು ಬೆಟ್ಟ ಅನ್ನತಿಂದು ಆಂಬೋಡೆ, ಹಾಲುಬಾಯಿಗೆ ಜಾಗ ಉಳಿದಿರುತ್ತದೆ ಎಂದು ಭಾವಿಸಿರಬೇಕು.

ಅದೇ ದಿನ ಸಂಜೆ ಕಾಫಿ ಜೊತೆ ಭೀಮು, ಅವನ ಹೆಂಡತಿ ರವೆ ಉಂಡೆ ಚಕ್ಕುಲಿ ತಿನ್ನುತ್ತಿದ್ದರೆ ನಾನು ಡೈಜೀನ್ ಮಾತ್ರೆ ಅಗಿಯುತ್ತ ಮತ್ತೆ ಸರ್ವಜ್ಞನ, ಅಲ್ಪ ಜ್ಞಾನವನ್ನು ಶಪಿಸುತ್ತಿದ್ದೆ.



ತೆಲುಗು ಗಂಗಾ ಅಂದ ಮೇಲೆ ಕನ್ನಡ ಕಾವೇರಿ ಯಾಕೆ ಮೇಲೆ ಬಿದ್ದು ಹೋಗಬೇಕು ಸಾರ್ ?



ರಜೆಗೋಸ್ಕರ ಹತ್ತನೇ ಬಾರಿ ಅಜ್ಜೀನ ಅನ್ಯಾಯವಾಗಿ ಕೊಲ್ತಿದೀರಲ್ರೀ !

ಸಿದ್ಧತೆ

—ಹಿರಿಯೂರು ರಾಘವೇಂದ್ರ

"ಟ್ರಿಣ್....... ....ಟ್ರಿಣ್"

"ಹಲೋ............ಯಾರು?"

... .

"ನಾನು ಅಂದ್ರೆ ಯಾರ್ರಿ? ಈ ನಾನು ಅನ್ನುವ ದುರಹಂಕಾರ ಮೊದಲು ಬಿಡಿ".......................

"ಹಲ್ಲು ಬಿಗಿ ಹಿಡಿಬೇಕ? ಆಯ್ತು ನೀವು ಕಟ್ಟಿಸಿಕೊಂಡಿರುವ ಹಲ್ಲು ಕಳಿಸಿ ಹಿಡಿದುಕೊಳ್ತೀನಿ"

"..............."

"ಏನು? ದುರಹಂಕಾರ ಅಂದರಾ? ಯಾಕೆ ಭಾನುವಾರ ನಾಳೆಯಾದರೂ ನೀವು ಇವತ್ತೇ ಮೈಗೆ ಎಣ್ಣೆ ಹಚ್ಚಿಕೊಂಡಿರುವ ಹಾಗಿದೆ...... ಖರ್ಚಿಗೇನಾದರೂ ಬೇಕಾಗಿತ್ತ?"

".... ...."

"ನಿಮ್ಮ ಧಿಮಾಕಿನ ಮಾತುಗಳನ್ನೆಲ್ಲ ಬದಿಗಿಡಿ, ನೀವು ಯಾರು ಏನು ಕೆಲಸ ಹೇಳುತ್ತೀರೋ ಇಲ್ಲ ಫೋನ್ ಕೆಳಗಿಡಲೋ

"............."

"ಸ್ಸ......ಸ್ಸಾರಿ ಸಾರ್ ದಯವಿಟ್ಟು ನನ್ನ ತಪ್ಪನ್ನು ಕ್ಷಮಿಸಿಬಿಡಿ ನೀವು ಎಂದು ಗೊತ್ತಾಗಲಿಲ್ಲ. ಮಾತಿನ ಧಾಟಿ ಕಂಡು ಯಾವನೋ ಹಲ್ಕಾ ಎಂದು ಭಾವಿಸಿದೆ......ಹೌದು ಸಾರ್ ಇದು ಡೈರಿ ಡವಲಪ್ಮೆಂಟ್ ಕಾರ್ಪೋರೇಷನ್ನೇ. ನನ್ನಿಂದ ಏನು ಸಹಾಯವಾಗಬೇಕಿತ್ತು ಹೇಳಿ........ಅಂ........ಬೆಣ್ಣೆ ತುಪ್ಪ ಎಷ್ಟು ಸಾಧ್ಯವೋ ಅಷ್ಟು ಸ್ಪಾಕಿಟ್ಟುಕೊಳ್ಳಬೇಕ? ನೀವು ತಪ್ಪಾಗಿ ಭಾವಿಸದಿದ್ದರೊಂದು ಮಾತು ಸಾರ್ ಅಷ್ಟೊಂದು ಸ್ಟಾಕಿಟ್ಟುಕೊಂಡು ನಂತರ ಖರ್ಚಾಗದಿದ್ದರೆ ವಿರೋಧ ಪಕ್ಷದವರು ಗಲಾಟೆ ಮಾಡಿ, ತೊಂದರೆ ಮಾಡಬಹುದಲ್ವಾ ? ಅಂದ ಹಾಗೆ ಇಷ್ಟೊಂದು...............ಏನ್ಸಾರ್ ಮಧ್ಯಂತರ ಚುನಾವಣೆಯಾಗಬಹುದು ಅಂತೀರಾ? ಅದಕ್ಕೂ ಇದಕ್ಕೂ ಏನು ಸಂಬಂಧ ಸಾರ್?............ಹೆ............ಹ್ಹ ಹಾಗಂತೀರಾ? ಜನಕ್ಕೆ ಹೆಚ್ಚೋದಿಕ್ಕಾ? ಆಯ್ತು ನೀವು ಈ ಯೋಚನೆ ಬಿಡಿ ಅಂದಹಾಗೆ ನನ್ನ ಪ್ರಮೋಷನ್ ಬಗ್ಗೆ ಕೊಂಚ ......ಓ.ಕೆ ಸರ್........ಥ್ಯಾಂಕ್ಸ್?

ಮಾನ ಮರ್ಯಾದೆಯ ಪ್ರಶ್ನೆ

ಮುಂ.ಕೇ.

ಕೆರ, ಮೆಟ್ಟು, ಎಕ್ಕಡ, ಚಪ್ಪಲಿ, ಹಾವುಗೆ, ಇವೆಲ್ಲಾ ಒಂದೇ ವಸ್ತುವಿನ ಹಲವು ಹೆಸರುಗಳು ಎನ್ನುವುದು ನಿಮಗೆಲ್ಲಾ ಗೊತ್ತೇ ಇದೆ. ಸ್ಯಾಂಡಲ್ಸ್, ಶೂಸ್, ಬೂಟ್ಸ್ ಪಂಪ್ ಶೂಸ್, ಗಮ್‌ಬೂಟ್ಸ್ ಇತ್ಯಾದಿಗಳು ಪಾಶ್ಚಿಮಾತ್ಯ ಸಾಂಸ್ಕೃತಿಕ ಸಂಪರ್ಕದಿಂದ ಆಮದಾದ ವಿಶೇಷ ರೂಪಗಳು ಮಾತ್ರ. ಇವೆಲ್ಲಕ್ಕೂ ಒಟ್ಟು ಪಾದರಕ್ಷೆಗಳು ಎಂದು ಒಂದೇ ಹೆಸರನ್ನು ಅನುಮೋದಿಸಲು ಅಡ್ಡಿ ಇಲ್ಲ. [ಈ ಪಾದರಕ್ಷೆಗಳನ್ನು ಪಾದರಾಕ್ಷಿಗಳು ಎಂದೂ ಕೆಲವರು ಅಪಭ್ರಂಶಗೊಳಿಸಿದ್ದಾರೆ. 'ಪಾದರಾಕ್ಷಿಗಳನ್ನು ಹೊರಗೆ ಬಿಟ್ಟು ಬರಬೇಕು' ಎಂದು ಆದೇಶ ನೀಡುವ ಬೋರ್ಡು ಗಳನ್ನು ಕೆಲವು ಪವಿತ್ರ ಸ್ಥಳಗಳ ದ್ವಾರದಲ್ಲಿ ನೀವು ನೋಡಿರಬಹುದು.] ನಮ್ಮ ನಿಮ್ಮೆಲ್ಲರ ಸಾಮಾನ್ಯ ಹಾಗೂ ಸಾರ್ವತ್ರಿಕ ಅನುಭವಜನ್ಯ ಅಭಿಪ್ರಾಯದಂತೆ ಇವು ಗಳ ಪ್ರಥಮ ಕರ್ತವ್ಯ ಪಾದರಕ್ಷಣೆ. ಇವುಗಳಿಂದ ಇನ್ನೇನೂ ಉಪಯೋಗವಿದೆ ಯೆಂದು ಸಹಸಾ ಅನ್ನಿಸದಿದ್ದರೂ, ಮಾನ ಮರ್ಯಾದೆ, ಗೌರವ ಪ್ರತಿಷ್ಠೆಗಳಿಗೆ ಸಂಬಂಧಿಸಿದಂತೆ ಇವುಗಳಿಂದ ಕ್ರಿಯಾಶೀಲವಾದ ಪ್ರಯೋಜನವೂ ಆಗಬಹುದೆಂದು ಇತ್ತೀಚೆಗೆ ನನಗೆ ಖಾತರಿಯಾಯಿತು. ಚಪ್ಪಲಿ ಹಾರ ಹಾಕುವುದು. ಎಕ್ಕಡ ದಿಂದ ಸಜ್ಜಾಗಿ ಎದುರಾಳಿಯ ಮೇಲೆ ಎರಗುವುದು, ಅವರನ್ನು ಅಪಮಾನಗೊಳಿಸು ವುದು, ಕೆಲಸಕ್ಕೆ ಬಾರದ ವಸ್ತುವಿನ ಬೆಲೆಯನ್ನು ಹಳೇ ಎಕ್ಕಡಕ್ಕೆ ಸಮ ಎಂದು ತಿರ ಸ್ಕಾರಪೂರ್ಣ ಸಮೀಕರಣ ಮಾಡುವುದು—ಇವೆಲ್ಲಾ ಅಲ್ಲ ನಾ ಹೇಳುತ್ತಿರುವುದು. ಪಾದಗಳನ್ನು ರಕ್ಷಿಸಿದಂತೆಯೇ ಧರಿಸಿದವನ ಮಾನ ಮರ್ಯಾದೆಯನ್ನೂ ರಕ್ಷಿಸುವ ಶಕ್ತಿ ಇವಕ್ಕೆ ಇರುವುದೆಂದರೆ, ವಿಪರೀತ ಬೆಲೆಬಾಳುವ. ಆಕರ್ಷಕ ಪಾದರಕ್ಷಗಳನ್ನು ಧರಿಸಿ ನಿಮ್ಮ ವ್ಯಕ್ತಿತ್ವಕ್ಕೊಂದು ಹೊಸ ಆಯಾಮ ದೊರಕಿಸಿಕೊಳ್ಳಿ, ಹೋದಲ್ಲೆಲ್ಲಾ ಮನ್ನಣೆಗೆ ಪಾತ್ರರಾಗಿ ಎಂದೂ ಅಲ್ಲ ನಾ ಹೇಳುತ್ತಿರುವುದು. ಅತ್ಯಂತ ನೇರವಾಗಿ ಅತ್ಯಂತ ಕ್ರಿಯಾತ್ಮಕವಾಗಿ, ಅತ್ಯಂತ ಪ್ರಾಯೋಗಿಕವಾಗಿ, ಅತ್ಯಂತ ಚುರುಕಾಗಿ, ಯಶಸ್ವಿಯಾಗಿ ಧರಿಸಿದವನ ಮಾನ ಮರ್ಯಾದೆಯನ್ನು ಕಾಪಾಡಿದ 'ಒಂದು ಜೊತೆ ಅತ್ಯಂತ ಪ್ರಾಚೀನ ಎಕ್ಕಡಗಳ ಒಡೆಯ ಹಾಗೂ ಒಡನಾಡಿಯಾದ ಸಮಾಜ ಸೇವಕ ಅಣ್ಣಯ್ಯನ ಸಾಹಸ ಕೇಳಿ :

ಎಲ್ಲೆಲ್ಲೂ ಸಮಾಜ ಸೇವೆ ರಭಸದಿಂದ ನಡೆಯುತ್ತಿದ್ದಾಗ ಈ ದಿಕ್ಕಿನಲ್ಲಿ ತಾನೂ ಅಳಿಲು ಕಾಣಿಕೆ ಸಲ್ಲಿಸಲೇಬೇಕೆಂಬ ಮಹತ್ವಾಕಾಂಕ್ಷೆಯಿಂದ ಪೀಡಿತನಾದ ಅಣ್ಣಯ್ಯ

ಹಲವಾರು ಯೋಜನೆಗಳನ್ನು ಚಿಂತಿಸಿ ಅವೆಲ್ಲಾ ಪ್ರಯೋಜನವಿಲ್ಲವೆಂದು ತಳ್ಳಿಹಾಕಿ ಕೊನೆಗೆ ಸಾಮೂಹಿಕ ವಿವಾಹದ ಒಂದು ಸಂಚನ್ನು ಗಟ್ಟಿಮಾಡಿಕೊಂಡ. ಆದಷ್ಟು ತೀವ್ರವಾಗಿ ಈ ಕೆಲಸ ಆಗಲೇಬೇಕೆಂದು ಆತುರದಿಂದ ಮೂರು ದಿನಗಳಲ್ಲೇ ಲಗ್ನ ನಿಶ್ಚಯಿಸಿದ. ತಕ್ಷಣ ಮುದ್ರಣಾಲಯಕ್ಕೆ ಓಡಿ, 'ಈ ಕೂಡ್ಲೇ ಒಂದು ಸಾವಿರ ಹ್ಯಾಂಡ್ ಬಿಲ್ ಕಮ್ ಸಾಮೂಹಿಕ ವಿವಾಹ ಲಗ್ನಪತ್ರಿಕೆಯನ್ನು ಅಂದವಾಗಿ ಶೀಘ್ರವಾಗಿ ಮುದ್ರಿಸಿಕೊಡು' ಎಂದು ಪ್ರಿಂಟ್ ಆರ್ಡರ್ ಕೊಟ್ಟ. ಮಹಾ ಮಠದ ಜಗದ್ಗುರುಗಳೂ, ಸಮಾಜ ಕಲ್ಯಾಣ ಸಚಿವರೂ ಸ್ಥಳೀಯ ಶಾಸಕರೂ, ಸಂಸತ್ ಸದಸ್ಯರೂ, ಜಿಲ್ಲಾಧಿಕಾರಿಗಳೂ, ಬ್ಯಾಂಕ್ ಮೇನೇಜರೂ, ತಾಲ್ಲೂಕು ಬೋರ್ಡ್ ಅಧ್ಯಕ್ಷರೂ, ಹೆಸರಾಂತ ಸಾಹಿತಿಗಳೂ, ಪತ್ರಕರ್ತರೂ ಭಾಗವಹಿಸಲಿದ್ದ ಸಾಮೂಹಿಕ ವಿವಾಹ ಲಗ್ನ ಪತ್ರಿಕೆಯನ್ನು ಒಂದೇ ದಿನದಲ್ಲಿ ಅಂದವಾಗಿ, ಅಚ್ಚುಕಟ್ಟಾಗಿ ಮುದ್ರಿಸಿಕೊಡಲು ಸಾಧ್ಯವಿಲ್ಲ ಎಂದು ಮುದ್ರಕ ಖಡಾ ಖಂಡಿತವಾಗಿ ಹೇಳಿದ. ಧೈರ್ಯಗೆಡದ ಅಣ್ಣಯ್ಯ, 'ಇದು ನನ್ನ ಮಾನದ ಪ್ರಶ್ನೆ—ಎಲ್ಲಾ ಸಿದ್ಧವಾಗಿದೆ, ನೀನು ಮಾಡಿಕೊಡದಿದ್ರೆ ನಾನು ಹಾಳು ಬಾವಿಗೆ ಬೀಳುತ್ತೇನೆ....ತಪ್ಪು ನನ್ನದು, ನಿಜ,' ಎಂದು ತನ್ನ ಚಪ್ಪಲಿಗಳನ್ನು ಕಳಚಿ ಅವನ ಮುಂದೆ ಹಿಡಿದು, 'ತಗೋ ನನ್ನ ತಲೇ ಮೇಲೆ ಹೊಡಿ... ಆದ್ರೆ ಪ್ರಿಂಟ್ ಮಾಡಿಕೊಡು', ಎಂದು ಅಂಗಲಾಚಿದ. ಮುದ್ರಕ ಮಣಿದ. ಅಣ್ಣಯ್ಯ ಅಲ್ಲಿಂದ ಜಗದ್ಗುರುಗಳತ್ತ ಓಡಿದ. 'ಮೂರನೇ ತಾರೀಖು ನಮಗೆ ಬಿಡುವಿಲ್ಲ .. ಮಠದಲ್ಲಿ ಇಲಿಗಳನ್ನು ಹಿಡಿಯೋ ವ್ಯಾಪಕ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ' ಎಂದರು ಜಗದ್ಗುರುಗಳು. ಜಗ್ಗದ ಅಣ್ಣಯ್ಯ ಚಪ್ಪಲಿ ಕಳಚಿ ಅವರ ಮುಂದೆ ಹಿಡಿದು, ಇದರಲ್ಲಿ ಹೊಡೆಯಿರಿ ನನ್ನ ತಲೆ ಮೇಲೆ ....ಎಲ್ಲಾ ಸಿದ್ಧವಾಗ್ಬಿಟ್ಟಿದೆ ನೀವು ಬಂದು ವಧೂವರರನ್ನು ಆಶೀರ್ವಾದ ಮಾಡದಿದ್ರೆ ನೇಣು ಹಾಕ್ಕೋತೀನೆ', ಎಂದ. ವಿನಯದಿಂದ ಚಪ್ಪಲಿಯನ್ನು ನಿರಾಕರಿಸಿದ ಸ್ವಾಮಿಗಳು 'ಶಾಂತಂ ಪಾಪಂ ಹಾಗೇ ಆಗ್ಲಿ, ಬರ್ತೀವಿ....ಇಲಿ ಹಿಡ್ಯೋ ಕೆಲಸ ನಾಲ್ಕನೇ ತಾರೀಖಿಗೆ ಹಾಕ್ಕೋತೀವಿ, ಶುಭಮಸ್ತು' ಎಂದರು. ಮಠದಿಂದ ಕಾಲು ಕಿತ್ತ ಅಣ್ಣಯ್ಯ ಸಚಿವರನ್ನು ಭೇಟಿಯಾಗಲು ರಾಜಧಾನಿಗೆ ಹೋದ. 3ನೇ ತಾರೀಖು ಅವರು ಸಂತಾನ ಹರಣ ಚಿಕಿತ್ಸಾ ಶಿಬಿರವೊಂದರ ಉದ್ಘಾಟನೆ ಮಾಡಲು ಒಪ್ಪಿಕೊಂಡಿದ್ದರು. ಅಣ್ಣಯ್ಯ, 'ತಗೊಳ್ಳಿ ಈ ಚಪ್ಲಿಯಿಂದ ಹೊಡೀರಿ· ಬಡೀರಿ .. ಆದ್ರೆ ನನ್ನ ಮಾನ ಕಾಪಾಡಿ, ನೀವು ಬಾರದಿದ್ರೆ ಬಿ.ಟಿ.ಎಸ್ ಬಸ್‌ಗೆ ಅಡ್ಡ ಬಂದು ಪ್ರಾಣ ಕಳಕೋತೀನೀ .. ಬರಿಗೈಲಿ ಊರಿಗೆ ಹಿಂದಿರುಗಲಾರೆ', ಎಂದ. ಸಚಿವರು ಒಪ್ಪದೇ ವಿಧಿಯಿರಲಿಲ್ಲ. ಶಾಸಕರು, ಸಂಸತ್ ಸದಸ್ಯರು ತಾಲ್ಲೂಕ್ ಬೋರ್ಡ್ ಅಧ್ಯಕ್ಷರು, ಜಿಲ್ಲಾಧಿಕಾರಿಗಳು, ಪತ್ರಕರ್ತರು, ಸಾಹಿತಿಗಳು —ಯಾರು ಯಾರ ಹೆಸರನ್ನು ಲಗ್ನಪತ್ರಿಕೆಯಲ್ಲಿ ಛಾಪಿಸಿದ್ದನೋ ಅವರೆಲ್ಲರ


ಮುಂದೂ ತನ್ನ ಜೀರ್ಣ ಶೀರ್ಣ ಪಾದರಕ್ಷೆಗಳನ್ನು ಹಿಡಿದು, ಅವರೆಲ್ಲರಿಗೂ ಇದ್ದ ಮಹತ್ಕಾರ್ಯಗಳಿಂದ ಅವರನ್ನು ವಿಮೋಚಿಸಿ, ಅವರೆಲ್ಲರೂ ಸಾಮೂಹಿಕ ವಿವಾಹ ವನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸಿಕೊಡುವುದಾಗಿ ಭರವಸೆ ಪಡೆಯುವುವರಲ್ಲಿ ಯಶಸ್ವಿಯಾದ. ಲಗ್ನಕ್ಕೆ ಇನ್ನೊಂದೇ ದಿನ ಉಳಿದಿತ್ತು. ಗಂಡು–ಹೆಣ್ಣುಗಳನ್ನು ಅರ್ಜೆಂಟಾಗಿ ಒದಗಿಸಬೇಕಾಗಿತ್ತು. ತನ್ನ ಊರು ಮತ್ತು ಸುತ್ತಲಿನ ನಾಲ್ಕಾರು ಊರುಗಳಲ್ಲಿ ಮನೆಮನೆಗೂ ಹೋಗಿ, 'ಮದುವೆಗೆ ಹದನಾದ ಗಂಡು ಹೆಣ್ಣುಗಳಿ ವೆಯೇ?' ಎಂದು ಪ್ರಶ್ನಿಸಿ ಪಟ್ಟಿಮಾಡಿ ಗಂಡಿಗೊಂದು ಹೆಣ್ಣು, ಹೆಣ್ಣಿಗೊಂದು ಗಂಡು ಎಂಬ ವಿಶಾಲ ಆಧಾರದ ಮೇಲೆ ವಧೂವರರನ್ನು ಸೆಟ್ ಮಾಡಿದ. ರಾತ್ರಿ ತನ್ನ ಮನೆಯಲ್ಲಿ ಸಂಬಂಧಪಟ್ಟವರೆಲ್ಲರ ಸಭೆ ಸೇರಿಸಿ ತನ್ನ ಶುಭ ಪ್ರಸ್ತಾಪವನ್ನು ಅವರ ಅನುಮೋದನೆಗಾಗಿ ಮಂಡಿಸಿದ. 'ಇದೆಲ್ಲಾ ಹೆಂಗಾಗ್ತದೆ...ಇಷ್ಟೊಂದ್ ಅರ್ಜೆಂಟಾಗಿ ಮದ್ವೆಮಾಡಿ ಅಂದ್ರೆ....' ಅಂತ ಹಲವಾರು ಕಂಠಗಳು ಆಕ್ಷೇಪವನ್ನೆ ತ್ತಿದಾಗ, ಅಣ್ಣಯ್ಯ ತನ್ನ ಚಪ್ಪಲಿಗಳನ್ನು ಕಳಚಿ ಜೋಡಿಸಿಕೊಂಡು ಸಭೆಯ ಮುಂದೆ ಒಡ್ಡಿ, 'ಏನೋ ಒಂದು ಶುಭಕಾರ್ಯ... ಸಮಾಜ ಸೇವೆ...ಪುಣ್ಯದ ಕೆಲ್ಸ, ಮಿತ ಖರ್ಚು...ನಿಮಗೆಲ್ಲಾ ಅನುಕೂಲವಾಗ್ಲಿ ಅಂತ ಎಲ್ಲಾ ಏರ್ಪಾಟೂ ಮಾಡ್ಬಿ ಟ್ಟಿದೀನಿ .. ನೀವು ಈಗ ಸಹಕಾರ ಕೊಡದೆ ಇದ್ರೆ ಇಲಿ ಪಾಷಾಣ ತಿಂದು ಪ್ರಾಣ ಬಿಡ್ತೀನಿ...ತಗೊಳ್ಳಿ ಈ ಚಪ್ಲೀನ....ಹೊಡೀರಿ ನನ್ನ ತಲೆ ಮೇಲೆ. ಚಪ್ಲಿ ಕಿತ್ತು ಹೋಗ್ಲಿ, ತಲೆಕೂದ್ಲು ಉದ್ರುಹೋಗ್ಲಿ....ಆದ್ರೆ ಈ ಶುಭಕಾರ್ಯಕ್ಕೆ ವಿಘ್ನ ತರ ಬೇಡಿ...ತಗೊಳ್ಳಿ ಹೊಡೀರಿ...' ಎಂದು ಆಗ್ರಹಪಡಿಸಿ ಅವರನ್ನೆಲ್ಲಾ ಒಪ್ಪಿಸಿದ.

ರಾತ್ರೋರಾತ್ರಿ ಸಾಹುಕಾರರ ಬಳಿ, ಜವಳಿ ವ್ಯಾಪಾರಿಗಳ ಬಳಿ ಒಂದು ಚಪ್ಪಲಿ ಝಳಪಿಸಿ ಅದರಿಂದ ಹೊಡೆಯಿರೆಂದು ಆಹ್ವಾನಿಸಿ, ಆದರೆ ಮದುವೆಗೆ ಬೇಕಾದ ಖರ್ಚನ್ನು ವಂತಿಗೆಯಾಗಿ ಕೊಡಿ ಎಂದು ವಸೂಲು ಮಾಡಿದ.

ಅಂತೂ ತರಾತುರಿಯಿಂದ ಓಡಾಡಿ ಮಾಂಗಲ್ಯ, ಸೀರೆ, ಖಣ, ಪಂಚೆಗಳನ್ನು ಹೊಂದಿಸಿ, ಕಂಡಕಂಡವರಿಗೆಲ್ಲಾ ಚಪ್ಪಲಿ ನೀಡಿ 'ಹೊಡೆಯಿರಿ, ಆದರೆ ಸಹಾಯ ಮಾಡಿ' ಎಂಬ 'ಸ್ಲೋಗನ್ ಹೇಳುತ್ತಾ ಚಪ್ಪರ ಹಾಕಿಸಿ. ಮೈಕ್ ಸೆಟ್ ಮೊಳಗಿಸಿ, ಹಾರ ತುರಾಯಿಗಳನ್ನು ಹೊಂದಿಸಿ, ಪ್ರತಿಷ್ಠಿತರನ್ನು ವೇದಿಕೆಗೆ ಸಕಲ ಮರ್ಯಾದೆ ಗಳಿಂದಲೂ ತಂದು, ಸಾಮೂಹಿಕ ವಿವಾಹವನ್ನು ಸಾಂಗವಾಗಿ ನೆರವೇರಿಸಿ. ಹಳೆಯ ಪ್ರಹಸನಗಳಲ್ಲಿ ಹೇಳಿರುವಂತೆ ಕೊನುಕೊಂಟಿನಿ ಊದಿಸೇಬಿಟ್ಟ.

ನೆರೆದಿದ್ದ ಪತ್ರಿಕಾ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಾ ಮಾನ್ಯ ಸಚಿವರು ಅಣ್ಣಯ್ಯನವರ ಸಾಹಸ ಮೆಚ್ಚತಕ್ಕದ್ದೆಂದು ಶ್ಲಾಘಿಸಿದಾಗ. 'ಇದೆಲ್ಲಾ ನನ್ನ ಹಳೆಯ

ಹರಕು ಚಪ್ಪಲಿಯ ಕೃಪೆ' ಎಂದು ಅಣ್ಣಯ್ಯ ಚಪ್ಪಲಿಗಳನ್ನು ಕಳಚಿ ಕಣ್ಣಿಗೊತ್ತಿ ಕೊಳ್ಳುತ್ತಿದ್ದಾಗ ಪತ್ರಿಕೆಯವರು ಅವನ ಫೋಟೋ ಹಿಡಿದರು. ತನ್ನ ಮುಪ್ಪಿನ ದೆಸೆಯಿಂದ ಸಮರ್ಪಕವಾಗಿ ಪಾದರಕ್ಷಣೆ ಮಾಡಲು ಅಸಮರ್ಥದಾಗಿದ್ದರೂ ಸಮಾಜ ಸೇವಾ ಕಾರ್ಯದಲ್ಲಿ ತನ್ನ ಮಾನ ಕಾಪಾಡಿದ ಚಪ್ಪಲಿ ಜೊತೆಯನ್ನು ಅಣ್ಣಯ್ಯ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವುದರಲ್ಲಿ ಆಶ್ಚರ್ಯವೇನಿದೆ ?



ಈ ಪಕ್ಷಿಗಳಿಂದ ಏನೂ ಭಯವಿಲ್ಲ ಕಣೇ !

21

ಹಿಟ್ಲರ್ ಥರಾ ಅಲ್ಲ, ಬಟ್ಲರ್ ಥರಾ.......

ಹ.ಶಿ. ಭೈರನಟ್ಟಿ

"ಚಿಲ್ಲರ್ ಇದೆಯೇನ್ರಿ ?"

"ಚಿಲ್ಲರ್ ಸಮಸ್ಯೆ ಬೇಕಾದಷ್ಟಿವೆ."

"ಚಿಲ್ಲರ್ ಸಮಸ್ಯೆ ನಿಮಗೆ ಬೇಕಾದಷ್ಟಿದ್ದರೆ ನನಗೆ ಸಾಕಾಗುವಷ್ಟಿವೆ. ನನಗೆ ಬೇಕಾದದ್ದು ಚಿಲ್ಲರ್, ಛಿಲ್ಲರ್, ಛೇಂಜ್..."

"ನನಗೂ ಕನ್ನಡ ಬರ್ತ್ತದೆರೀ. ನೀವೊಬ್ಬರೇ ವಿದ್ವಾಂಸರಲ್ಲ. ಛೇಂಜ್ ಅಂತ ಇಂಗ್ಲೀಷಿನಲ್ಲಿ ಹೇಳೋದೇನು, ನಾಚಿಕೆಯಾಗೋದಿಲ್ಲವೇ ?"

"ಯಾವುದು ಇಂಗ್ಲೀಷ್ ಶಬ್ದ ? ಛೇಂಜಾ ? ಅದನ್ನ ಎಂದೋ ಆಮದು ಮಾಡಿಕೊಂಡಾಗಿದೆ. ನಾಚಿಕೆ ನಿಮಗೆ ಆಗ್ಬೇಕು–ಇಷ್ಟೂ ಗೊತ್ತಿಲ್ಲ ಅಂದ್ಮೇಲೆ. ಈಗ ಛೇಂಜ್ ಅನ್ನೋದು ನಮ್ಮದೇ ಶಬ್ದ, ಉಳುವವನೇ ಮಾಲಿಕ"

"ಸ್ವಾಮೀ ನೀವೇ ಮಾಲಿಕರಾಗಿ. ಛೇಂಜ್ ಅನ್ನೋದು ನಿಮ್ಮದೇ ಶಬ್ದ ಆದ್ರೆ ನೀವೇ ಇಟ್ಕೊಳ್ಳಿ. ಈಗ ನನ್ನಿಂದ ಆಗಬೇಕಾಗಿದೆ ಏನು ?"

"ನನಗೆ ಚಿಲ್ಲರ್ ಬೇಕು."

"ನಿಮಗೆ ಏನೇನೇನೋ ಬೇಕಾಗಿರ್ತವೆ. ಬಿಡಿ. ಆದ್ರೆ ಕೇಳೋ ರೀತಿ ಯೇನ್ರಿ ಇದೂ ? ಒಳ್ಳೆ ಹಿಟ್ಲರ್ ಥರಾ ದಬಾಯಿಸ್ತ ಇದೀರಿ ?"

ನಾನೆಲ್ಲಿ ದಬಾಯಿಸಿದ್ದು ? ಬಟ್ಲರ್ ಥರಾ ರಿಕ್ವೆಸ್ಟ್ ಮಾಡ್ಕೊಂಡೆ. ಕೇಳ್ತೀರಾ ? ಪಾಚಿಗೆ ಪಾಚಿ ಹಚ್ಚಿ ಮಾತು ಹೊಸೇತಿದ್ದೀರಿ"

"ಅಯ್ಯೊ ಅಯ್ಯೊ ಅಯ್ಯೋ... ಎಂಥಾ ಆರೋಪ ಹೊರಸ್ತಿದೀರಿ ಸ್ವಾಮಿ ? ಬರುವಾಗ ಒಂದಷ್ಟು ಸೂಡು ಕಟ್ಕೊಂಡೇ ಬಂದಿದೀರಿ ಅಂತ ಕಾಣ್ತದೆ ಈ ಪಾಚೀದು ಅಂತಲೇ ಒಂದಾದ ಮೇಲೆ ಒಂದು ನೀವೇ ಹಚ್ತಿದೀರಿ ಪಾಚೀ ಈ–ಪಾಟಿ.

"ಪಾಟೀ ವಿಷಯ ಬಿಡ್ರಿ, ನಾನು ಕೇಳಿದ್ದು ಚಿಲ್ಲರ್"

"ಅದಕ್ಕೆ ಉತ್ತರ ಕೊಟ್ಟ್ಯಾಯ್ತಲ್ರೀ ? ಚಿಲ್ಲರ್ ಸಮಸ್ಯೆ ಬೇಕಾದಷ್ಟಿವೆ ಅಂತ"

"ಇದೇನ್ ಹಾವು ಏಣಿ ಆಟಾ ಆಡಸ್ತದೀರಿ ?"

"ನಿಮ್ಮಂಥವರ ಜೊತೆ ಮತ್ತ್ಯಾವ ಆಟಾ ಆಡಬೇಕ್ರೀ ?"

"ನನಗೆ ಬೇಕಾದದ್ದು ಚಿಲ್ರೆ, ಚಿಲ್ಲರ್, ಛಿಲ್ಲರ್, ಚೇಂಜ್, ಛೇಂಜ್...'

ಇಳಿದಿರಾ ಹಾವಿನ ಗುಂಟ ನೀವೂ....?"

"ಇದ್ರೇನ್ರೀ ಚೆಂಡ್ ನನಗೇ ಎಸೀತಿದೀರಿ ? ಚಿಲ್ಲರೆ ಇದ್ರೆ ಕೊಡ್ರೀ...."

ಸ್ವಾಮಿ ಈ ರೀತಿ ದಬಾಯಿಸಿದ್ರೆ ಚಿಲ್ಲರ್ ಸಿಗೋದಿಲ್ಲ"

"ದಬಾಣಿಕೆ ಹೇಗಾಗ್ತದೆ ? ನಾನೇನು ಹಿಟ್ಲರ್ ಅಂತ ತಿಳಿದಿರಾ ?

"ಹೌದು. ಹೇಗಂತ ಹೇಳಲಾ ? ಚಿಲ್ಲರ್ ಇದೆಯೇನ್ರೀ ಅಂತಲ್ಲವೇ ನೀವು ಕೇಳಿದ್ದು ?"

"ಕರೆಕ್ಟ್"

"ಅಂದ್ರೆ ನನ್ಕಡೆ ಚಿಲ್ಲರ್ ಇದೆ ಅಂತ ಒಪ್ಕೊಂಡು ಎಷ್ಟೆಷ್ಟರ ಚಿಲ್ಲರೆ ಎಷ್ಟೆಷ್ಟು ಇವೆ, ನಾಣ್ಯ ಎಷ್ಟಿವೆ, ನೋಟು ಎಷ್ಟಿವೆ ಅಂತೆಲ್ಲಾ ನಿಮಗೆ ವರದಿ ಒಪ್ಪಿಸಬೇಕೇನ್ರೀ ? ನಾನು ಚಿಲ್ಲರೆ ಇಟ್ಕೊಂಡು ಮಹಾತಪ್ಪು ಮಾಡಿದೀನಿ ಅನ್ನೋವ್ರು ಹಾಗೆ ಮಾತಾಡ್ತಿದೀರಲ್ರೀ ? ಸ್ವಲ್ಪ ಇಚಾರಿಸಿ ಮಾತಾಡೋದು ಕಲೀರಿ ಸ್ವಾಮೀ. ನಾಲಿಗೆ ಬಿಗಿ ಹಿಡಿದು ಮಾತಾಡೋದು ಕಲೀರಿ."

"ನಿಮ್ಮ ಜೊತೆ ಮಾತಾಡೋರೇ ಮೂರ್ಖರು"

"ಯಾಕ್ರೀ ನಿಮ್ಮನ್ನೀವೇ ಬೈಕೋತಿದೀರಿ ? ನಿಮ್ಮನ್ನು ಬೈಯಲಿಕ್ಕೆ ಯಾರೂ ಸಿಗಲಿಲ್ವೇ ? ಕೂಲಿ ಕೊಟ್ಟಾದ್ರೂ ಬೈಸಿಕೋ ಹೋಗ್ರೀ..."

ಛೆ"

"ನಿಮಗೆ ಬೇಕಾದ್ದು ಚಿಲ್ಲರೆ ಅಲ್ವೇನ್ರೀ. ಎಷ್ಟರದು ಬೇಕಾಗಿವೆ ಹೇಳಿ

"ಎಂಟಾಣೇದ್ದು"

"ಹೀಗೆ ಬನ್ನೀ ಸ್ವಾಮಿ ಹಾದಿಗೆ. ಎಂಟಾಣೇದ್ದು ಚಿಲ್ಲರೆ ಇದೆಯೇನ್ರೀ ಅಂದ್ರೆ ಆಗಲೇ ಕೊಟ್ಟು ಬಿಡ್ತಿದ್ದೆ"

"ಅದೇ ಧೋರಣೆಯಿಂದಲೇ ನಾನು ಕೇಳಿದ್ದು"

"ಧೋರಣೆ ಮುಖ್ಯ ಅಲ್ಲ ಸ್ವಾಮೀ. ಮಾತು ಮುಖ್ಯ, ಮಾತೇ ಮುತ್ತು. ಧೋರಣೆಗೇನೂ ಧಾರಣೆ ಇಲ್ಲ. ಧಾರಣೆ ಇರೋದು ಮಾತಿಗೆ, ಮಾಥಿಗೆ' ಮ್ಹಾಥಿಗೆ..."

"ಚುನಾವಣೆ ಮುಗಿದುವಲ್ರೀ ?"

"ಎತ್ತಿದಿರಾ ಈ ಮಾತು ? ಚಿಲ್ಲರೆ ಸಮಸ್ಯೆ ಬಗೀ ಹರಸ್ರೀ ಮೊದ್ಲು. ನಂತರ ಬೇಕಾದರೆ ರಾಜಕೀಯ ಮಾಡ್ತಾ ಅರಾಜಕೀಯ ಎಬ್ಬಸ್ರಿ, ರಾಜಕೀಯ ಮಾಡ್ರಿ, ರಾಜ್ಯಕೀಯಾನೂ ಮಾಡ್ರಿ. ಬೆಲೆ ಇಳಿಸುವಂಥಾ ಕೆಲಸ ನಿಮ್ಮಿಂದ ಸಾಧ್ಯ ಇಲ್ಲ. ಬಂಡೆಗಲ್ ಒಡೆಯೋದು ನಿಮ್ಮಿಂದ ಸಾಧ್ಯವೇ ಇಲ್ಲಬಿಡಿ, ಚಿಲ್ಲರ ದಂಥಾ ಕಲ್ಲಾದ್ರೂ ಕಟೀರಿ ಸ್ವಾಮೀ ಸಣ್ಣ ಸಣ್ಣ ಸಮಸ್ಯೆಗಳನ್ನಾದ್ರೂ ಬಿಡಸ್ರಿ"

"ಬೆಲೆ ಇಳಸ್ತೇವಿ ಅಂತ ನಾವ್ಹಾವಾಗ ಹೇಳಿದ್ದು ? ಬೆಲೆ ಇಳಸ್ಲಿಕ್ಕೆ ಸಾಧ್ಯ ವಾದರೂ ಐತೇನ್ರೀ ? ಅದೂ ಒಮ್ಮೆ ಹತ್ತಿಸಿದ ಮ್ಯಾಲ ?"

"ಹತ್ತಿಸಿದವ್ರು ಯಾರು ? ನಾವು ಅಂಗಡಿಯವರಾ ?"

"ಮತ್ತೇನು ನಮ್ಮಂಥ ಗಿರಾಕಿಗಳಾ ?"

"ಯಾಕ್ರೀ ನಮ್ಮ ನಮ್ಮೊಳಗ ಜಗಳಾ ? ಬೆಲೆ ಇಳಸ್ಲಿಕ್ಕೆ ಯಾರಿಂದಲೂ ಸಾಧ್ಯ ಇಲ್ಲ. ಇಳಸ್ಲಿಕ್ಕೆ ಹೋದ್ರ ನಮ್ಮ ಬೆಲೇನೇ ಇಳಿದ ಬಿಡತೈತಿ"

"ಹಂಗ್ಯಾಂಗ ಆಸೆ ಕಳ್ಕೋತೀರಿ ? ನಿಮ್ಮಂಥ ಗಿರಾಕಿಗಳಿಗೆ ತಿಳೀದಿದ್ರ ನಾ

ತಿಳಸ್ಸಿನ ತಗೋರಿ. ನಿಮ್ಮದ ಉದಾಹರಣೇನ ನೋಡ್ರಿ. ನಿಮಗ ಚಿಲ್ಲರ್ ಬೇಕ ಹೆಂವಲ್ಲೋ ?

"ಹೌದು"

"ಬಸ್ ಹತ್ತಿ ಹೋಗ್ಲಿಕ್ಕೆ ಹೌದಲ್ಲೋ ? ಹಾದಾದ್ರೆ ಹೌದನ್ರೀ. ಅದಾದ್ರೆ ನನ್ನನ್ನ ಮಚ್ಚೀಲೆ ಬಡೀರಿ"

"ಮಚ್ಚೀ ಗಿಚ್ಚೀ ಮಾತು ಬೇಡ. ಹೇಳ್ರಿ ಹೇಳ್ರಿ..."

"ಸ್ವಾಮೀ ನಿಮಗೇನ ಕಾಲಿಲ್ವೇ ? ನಡೀತಾ ಹೋದ್ರೆ ಮೂವತ್ತು ಪೈಸೆ ಉಳಿತಾಯ. ಚಿಲ್ಲರೆ ಹುಡುಕೋ ತಾಪತ್ರಯ ಇಲ್ಲ. ನಾನು ಚಿಲ್ಲರೆ ಕೊಡೋದಿಲ್ಲ ಅಂದ್ರೆ ಹತ್ತಿಪ್ಪತ್ತು ಪೈಸಾದ್ದು ಏನಾದ್ರೂ ಕೊಂಡ್ಕೋತೀರಿ. ಪ್ರಸಂಗದ ಕೈಗೊಂಬೆ ಆಗಿ ಕುಣೀತೀರಿ ನಾ ಕೊಟ್ಟಷ್ಟೆ ತಗೊಂಡ ಹೋಗ್ತೀರಿ. ಅಗತ್ಯ ಇದ್ದಲ್ಲಿ ಅಮೃತ ಇರತ್ತೈತಿ ಅನ್ನೋ ಜಾತಿ ನಮ್ದು. ನೀವು ಸ್ನೇಹಿತರೂ ಅಂತ ನನ್ನ ಸೀಕ್ರೆಟ್ ಹೇಳ್ತಿದೀನಿ. ನೀವು ಈ ರೀತಿ ಹಣಾ ಪೋಲು ಮಾಡ್ದೆ ಕೂಡಸ್ತಾ ಕೂಡಸ್ತಾ ಹೋಗ್ಬೇಕು. ನೀವು ಶ್ರೀಮಂತ್ರಾಗ್ಬೇಕು, ಕುಬೇರರಾಗಬೇಕು. ಪ್ರತಿಯೊಬ್ರೂ ಕುಬೇರರಾದ್ರೆ ನಮ್ಮ ದೇಶಾನೇ ಕುಬೇರರ ದೇಶ ಆಗಿಬಿಡ್ತೈತಿ. ಆಗ ಬಡ್ತನ ಅನ್ನೋದು ಕಾಲುಕಿತ್ಕೊಂಡು ಓಡತ್ತೈತಿ, ಅರೆ ಯಾಕ್ರೀ ಓಡ್ತಿದೀರಿ ?"

"ಬಸ್ ಬಂತು ! !"

ಇದೆ ಸಂಚಿಕೆಯ 6ನೇ ಪುಟದಲ್ಲಿ ಪ್ರಕಟವಾಗಿರುವ ಕುಹಕ ಚಕ್ರ ಬಂಧದ ಸರಿಯುತ್ತರ.

ಅಡ್ಡ

1. ಪ್ರಾಯ 2. ಉಪಗ್ರಹ 4. ಗುಂಡು 5. ಮಾಮೂಲು 6. ಪುಣ್ಯ 7. ನೋಡೋಣ 8. ಕಲ್ಲು 11. ಕಿಲಾಡಿ 13. ಕರಾಮತ್ತು 15. ಮರಗಟ್ಟು 16. ಟಗರು ಕಾಳಗ 17. ಸಚಿವ

ಉದ್ದ

1. ಪ್ರಾಮಾಣಿಕ 3. ಗ್ರಹಣ 4. ಗುಂಪು 9. ಆರಾಮು 10. ಸೋಮರಸ 12. ಲಾಯರು 14. ದಾಳ

ಮುಖಾ ಮುಖಿ-೨

—ಅಪ್ರಸ್ತುತ

ಅಪರಂಜಿ ಕೊಂಪೆಯಲ್ಲಿ ಕುಳಿತು ಪೇಪರಿನಲ್ಲಿ ಲೇಟೆಸ್ಟ್ ಚಿತ್ರದ ನಾಯಕಿಯ ಮೇಕಪ್ ಪರೀಕ್ಷಿಸುತ್ತಿದ್ದಳು. ಕೊರವಂಜಿ ಒಳಗಿನಿಂದ ಹಣಿಕಿಹಾಕಿ

"ಏನದು ?" ಎಂದಳು

"ಇದು ಪೂರ್ವಚಿತ್ರಿಯ ಫೋಟೋ, ಅವಳು ಕೋಟಿ ಕೋಟಿ ಕನ್ನಡಿಗರ ಕನಸಿನ ಕನ್ಯೆ, ಬ್ಯೂಟಿ ಟಿಪ್ಸ್ ಕೊಟ್ಟಿದ್ದಾಳೆ."

"ಅದನ್ನೇನು ನೋಡುತ್ತಿದ್ದೆ?"

"ಇಷ್ಟೊಂದು ಮೇಕಪ್, ಹೆವಿಯಾಗಿ ಮಾಡಿಕೊಳ್ಳಲು ಟಿಪ್ಸ್ ಕೊಟ್ಟಿ ದ್ದಾಳಲ್ಲ, ಇವಿಲ್ಲದಿದ್ದರೆ ಇವಳು ಯಾರ ಕನಸಿನ ಕನ್ಯೆ ಅಂತಯೋಚಿಸುತ್ತಿದ್ದೆ"

"ಅದಕ್ಕೇ ನೀನು ಈ ಕೊಂಪೆಯಲ್ಲಿ ಕೊಳೆಯುತ್ತಿರುವೆ. ನಗರಕ್ಕೆ ಹೋಗು" ಎಂದಳು ಕೊರವಂಜಿ.

ಅಷ್ಟರಲ್ಲಿ ಹೊರಗಡೆ ಪೀಪಿ ಊದಿದ ಸದ್ದು.

"ಅದೋ ನಿನ್ನ ಫ್ರೆಂಡ್ ಬಂದಿದ್ದಾನೆ. ಯಾಕೆ ಹೀಗೆಲ್ಲಾ ಅವನ ಓಡಾಟ?"

"ಈಗಿನ ಹುಡುಗರ whims and fancies ಯಾರಿಗೂ ತಿಳಿಯದು. ಅವನಿಗೇನೋ ಗಾಢವಾದ ಸಮಸ್ಯೆ ಬಂದಿರಬೇಕು ಅದಕ್ಕೇ ಇಲ್ಲಿಗೆ ಬಂದಿದ್ದಾನೆ. ಅವನ ಮನಸ್ಸು ಕಗ್ಗಾಡಾಗದಂತೆ ನೋಡಿಕೊಳ್ಳುವ ಯತ್ನ" ಎಂದಳು ಅಪರಂಜಿ.

ಪೀಪಿಯ ಸದ್ದು ಹತ್ತಿರ ಹತ್ತಿರಕ್ಕೆ ಬಂದಿತು. ಕೊರವಂಜಿ ಗುಡಿಸಲನ್ನು ಬಿಟ್ಟು ಕಾಡ ಕಡೆಗೆ ಹೋದಳು.

ಪೀಪಿ ಊದುತ್ತಾ ಯುವಕ ಹೊಸ್ತಿಲು ದಾಟಿ ಒಳಕ್ಕೆ ಬಂದ.

"ಏನು ಸುದ್ದಿ?" ಎಂದಳು ಅಪರಂಜಿ

"ಟೇಕ್ ಆಫ್ ಟೈಂ ಇನ್ನು ಹದಿನೈದೇ ವರ್ಷ ಮುಂದಿನ ಶತಮಾನ."

"ಟೇಕ್ ಆಫ್ ಸುಲಭ, ಆದರೆ ಆಕಾಶದಲ್ಲಿ ರೇಡಾರ್‌ತೆರೆಯಿಂದ ಮಾಯವಾಗುವುದು ಮತ್ತೂ ಸುಲಭ, ರಹಸ್ಯ ಭೇದನೆಗೆ ತಿಂಗಳುಗಟ್ಟಲೆ ಶ್ರಮಿಸಬೇಕು" ಎಂದಳು ಅಪರಂಜಿ.

"ಅದಲ್ಲ ನಾನು ಹೇಳಿದ್ದು, ಇದೊಂದು ಚಿದಂಬರ ರಹಸ್ಯ."

"ಏನು ಕೊಲೆಯೋ, ಕಳವೇ, ದರೋಡೆಯೋ? ನನ್ನ ಬಳಿ ಯಾವ ದೂರೂ ಬಂದಿಲ್ಲವಲ್ಲ"

"ಆದರೆ" ಪೀಪಿ ಹುಡುಗ ಹೇಳಿದ "ಷೆರ್ಲಾಕ್ ಹೋಂಸ್, ಸ್ಲಿಂ ಕ್ಯಾಲಹನ್, ಲೆಮ್ಮೀ ಕಾಷನ್, ಪೆರಿ ಮೇಸನ್ ಇವರಲ್ಲರೂ, ಕರ್ನಾಟಕ ಆಂಧ್ರಗಳಲ್ಲಿ ರಹಸ್ಯ ಸಂಚಾರ ಮಾಡುತ್ತಿದ್ದಾರೆ"

"ಅವರ ಕಕ್ಷಿದಾರರು ಯಾರು"

"ಅಲ್ಲ ಇದು ಮಿಸ್ಟರಿ ಆಫ್‌ದಿ ಮಿಲೆನಿಯಂ ದೂರನ್ನು ಯಾರೂ ಕೊಟ್ಟಿಲ್ಲ. ಆರೋಪಣೆ ಮಾತ್ರ ಹೊರಿಸಿದ್ದಾರೆ. ಅದರ ನಿಗೂಢ ಸನ್ನಿವೇಶವನ್ನು ಗಮನಿಸಿ ಈ ಅತಿರಥ ಮಹಾರಥರೆಲ್ಲಾ ತಮ್ಮ ಬುದ್ಧಿಮತ್ತೆಯನ್ನು ಒರೆಗೆ ಹಚ್ಚಲು ಬಂದಿದ್ದಾರೆ ಅಂತಾ......."

"ಇದೇ, ಕೊಂಪೆಯಲ್ಲಿದ್ದರೆ ಆಗುವ ಅಥವಾ ತಟ್ಟುವ ಮಂಕು, ಗುಗ್ಗುತನ, ಬೆಪ್ಪು, ತೆಪರು ಅಥವಾ ಬೆಪರು ಪಂಪ ಗೊತ್ತೋ?"

"ಚೆನ್ನಾಗಿ, ನನ್ನ ಫ್ರೆಂಡ್ಸ್ ಹೇಳ್ತಾರೆ ಆತ ಯಾಕೆ ಕಾವ್ಯ ಬರೆದನೋ ಏನೋ, ನಮ್ಮ ಮೇಷ್ಟ್ರು ತಪ್ಪು ತಪ್ಪಾಗಿ ಓದಿ ಯಾತರದೋ ಒಂದು ಹೇಳಿಬಿಡ್ತಾರೆ, ದಿನಾ ಅವನ ಮರ್ಡರ್ ಸ್ಯಾರಿ ಅವನ ಕಾವ್ಯದ ಮರ್ಡರ್"

"ಅಯ್ಯೋ ಅಯ್ಯೋ ಪಂಪಾ, ಧಾತ್ರೀವಳಯ ನಿಳಿಂಪ, ನಿನಗಮೀ ಪರಿಯಾಯ್ತೇ, of course ವಿಧಾತೃವಶದೆ ಏನು ಮೋಟಿವ್ ಯಾರದಾದರೂ ಅರೆಸ್ಟಾಗಿದೆಯೇ?"

"ಹೇಳಿದ್ದನ್ನು ಕೇಳಿದ್ದೆಯೋ ಇಲ್ಲವೋ? ಬರಿ ಆರೋಪಣೆ. ಪಂಪ ಬರೆದಿರುವುದು ಎರಡೇ ಕಾವ್ಯ...."

"ಮೂರನೇದು ಯಾಕೆ ಬರೀಲಿಲ್ಲಾ ಅಂತ ಸಿಟ್ಟುಬಂದು ರೇಗಿ ಯಾರಾದರೂ....... ಛೆ, ಛೆ, ಸಾಧ್ಯವೇ ಇಲ್ಲ, ಯಾರೂ ಕಾವ್ಯ ಓದುವುದಿಲ್ಲ, ಓದಿದರೂ ಅರ್ಥವಾಗುವುದಿಲ್ಲ........"

"ನನ್ನ ಮಾತೊಂದಿಷ್ಟು ಕೇಳುತ್ತೀಯೋ......."

"ಅಥವಾ ಅರ್ಥವೇ ಆಗುವುದಿಲ್ಲ ಅಂತ ಯಾರಾದರೂ ಯಾರಾದರೂ..... ಅನ್ನೋದು ಹೇಗೆ ಸಾಧ್ಯ ಯಾವ ಪತ್ರಿಕೆಯಲ್ಲೂ ಅವನ ಕಾವ್ಯ ಪ್ರಿಂಟಾಗುತ್ತಲೇ ಇಲ್ಲವಲ್ಲ"

"ಮೈಡಿಯರ್ ಅಪರಂಜಿ ಜಸ್ಟ್ ಲಿಸನ್....... ಅವನು ಮತಾಂತರ ಹೊಂದಿದ್ದ........"

"ಆಗಲೂ ಈ ಪಿಡುಗು ಇತ್ತು ಅನ್ನು"

"ಆದರೆ ನಿಜವಾಗಿ ಅವನ ತಂದೆಯೇ ಮತಾಂತರ ಹೊಂದಿದ್ದ. ಅದಕ್ಕಾಗಿ ಒಂದು ಜಾತಿಯವರು ರೇಗಿ ಅವನನ್ನು ಕೊಂದಿರಬಹುದು. ಈ ಸಾಧ್ಯತೆ ಇದೆ. ಷೂರು ಅಂತಲೋ ಏನೋ ಪೇಪರಲ್ಲಿ ಬಂದಿತ್ತು"

"ಹಾಗಾದರೆ ಒಂದೊಂದೇ ಕಾವ್ಯವನ್ನು ಬರೆದರಲ್ಲಾ. ಅವರನ್ನು ಯಾರಾದರೂ ಮರ್ಡರ್ ಮಾಡಿರಬೇಕಲ್ಲವೇ?"

"ಪ್ಲೀಸ್, ಬಡಬಡಿಸ ಬೇಡ ನಿನ್ನ ಅಂಬೋಣ ಏನು ಅಂತ ಕೇಳೋಕ್ಕೆ ಬಂದಿದ್ದೇನೆ"

"ಲುಕ್ ಹಿಯರ್ ಪೀಪಿ ಬಾಯ್, ನನಗೆ ಪಂಪನ ವಿಷಯ ತಿಳಿದಿದ್ದೇ ಈಗ. ಕೆಲವು ತಿಂಗಳುಗಳ ಹಿಂದೆ ಪೇಪರಿನಲ್ಲಿ ಒಂದು ಗುಡ್ಡ, ಅದರ ಕೆಳಗೆ ಕೆಲವು ಮಡಿಕೆ ಚೂರುಗಳು ಇದ್ದ ಫೋಟೋ ಬಂದಿತ್ತು. ನನ್ನನ್ನು ಕೇಳಿದರೆ ಆ ಮಡಿಕೆ ಚೂರುಗಳನ್ನು ಹೋಲುವ ಚೂರುಗಳು, ಗುಡ್ಡಗಳೂ ಬೇಕಾದಷ್ಟಿವೆ ಅಲ್ಲೆಲ್ಲಿದ್ದ ಪಂಪ? ಅಲ್ಲದೆ ಅವನ ಮರ್ಡರ್ ಬಗ್ಗೆ ದೂರೇ ಇಲ್ಲ......."

"ಇದು ಸಾಹಿತ್ಯಲೋಕದ ಗಂಭೀರ ಸಮಸ್ಯೆ........"

"ಸಾಹಿತ್ಯಲೋಕ ಈ ಗತಿಗಿಳಿಯಿತೇ?"

"ಯಾವುದೋ ಗತಿಗೋ ಸ್ಥಿತಿಗೊ ಇಳಿದೋ ಏರಿಯೋ ಇದೆ. ಅದಕ್ಕಾಗಿ ಅತ್ತು ಏನು ಬಂತು. ನಿನ್ನ ಅಭಿಪ್ರಾಯ ಅಂದರೆ ಒಪಿನಿಯನ್ ಏನು?"

"ಎಲ್ಲೋ ಓದಿದ ಜ್ಞಾಪಕ" ಎಂದಳು ಅಪರಂಜಿ, "ಒಂದು ಮರ್ಡರ್ ಆಯಿತಂತೆ ಸ್ಕಾಟ್ಲೆಂಡ್‌ಯಾರ್ಡ್ಡಿಗೆ ದೂರು ಹೋಯಿತಂತೆ ಅಲ್ಲಿ ಇನ್ಸ್‌ಪೆಕ್ಟರ್ ರೈಡರ್ ಅಂತಲೋ ರೇಂಜರ್ ಅಂತಲೋ ಒಬ್ಬ ಇದ್ದ ಅವನು ಈ ಗುನ್ಹೆಯ ಕೊಲೆಗಾರನ ಸುಳಿವು ಕೊಟ್ಟವರಿಗೆ ಐದು ಸಾವಿರ ಪೌಂಡ್ ಬಹುಮಾನ ಅಂತ ಜಾಹಿರಾತು ಕೊಟ್ಟನಂತೆ ಎಂಟು ತಿಂಗಳಾದ ಮೇಲೆ ಒಬ್ಬ ಒಂದು ಕ್ಲೂ ಸಮೇತ ಬಂದನಂತೆ........"

"ಅಪರಂಜಿ, ಇದೇನು ಅಜ್ಜಿ ಕತೆ?"

"ಆ ಇನ್ಸ್‌ಪೇಕ್ಟರು ಅವನನ್ನು ಅರೆಸ್ಟ್ ಮಾಡಿ ಕೇಸ್ ಹಾಕಿದನಂತೆ .... ಅದಿರಲಿ ಏನು ಲೇಟೆಸ್ಟ್ ನ್ಯೂಸ್?"

"ವಿಶ್ವಾಮಿತ್ರ, ಮೇನಕೆ ಮೇಲೆ ಡೈವೋರ್ಸ್ ಕೇಸ್ ಹಾಕಿದ್ದಾನಂತೆ, ಮೇನಕೆ ಪರ ಗುರು, ವಿಶ್ವಾಮಿತ್ರನ ಪರ ಶುಕ್ರ ವಕೀಲಿ ಒಪ್ಪಿಕೊಂಡಿದ್ದಾರಂತೆ"

ಅಪರಂಜಿ ಪೀಪಿ ಹುಡುಗನಿಗೆ ಕುಳಿತುಕೊಳ್ಳಲು ಹೇಳಿ ಬಿಸಿ ಬಿಸಿ ಕಾಫಿ ತರಲು ಒಳಗೆ ಹೋದಳು.

“?”

“ಕೀಫ”

ಒಂದು ಬಾರಿ ಗೋರ್ನಳ್ಳಿ ಶ್ಯಾಂಭಟ್ಟರ ಮನೆಗೆ ಹೋಗಿದ್ದೆ. ಶ್ಯಾಂಭಟ್ಟರ ಮೊಮ್ಮಗ ಗೋಪಣ್ಣನಿಗೆ ಹೊಟ್ಟೆನೋವಾಗಿತ್ತು. ಬಂದು ನೋಡ್ಕೊಂಡ್ಹೋಗಿ ಡಾಕ್ಟ್ರೇ–ಅಂತ ನಂಗೆ ಹೇಳ್ಕಳ್ಸಿದ್ರು–ಹೋಗಿದ್ದೆ. ಮೊದಲು ಒಂದು ಲೋಟ ಕಾಫಿ ಕೊಟ್ರು – ಕುಡಿದೆ – ಸಂಪ್ರದಾಯ.

“ಎಲ್ಲಿ ಗೋಪಣ್ಣ ?” ಅಂತ ಕೇಳಿದೆ.

“ಪರಮೇಶ್ವರ, ಗೋಪು ಎಲ್ಲಿ ?” ಅಂತ ಶ್ಯಾಂಭಟ್ರು ಗೋಪಣ್ಣನ ತಂದೇನ ವಿಚಾರಿಸಿದರು.

“ಮೂಕಮ್ಮಾ, ಗೋಪಾಲಕೃಷ್ಣನ್ನ ನೋಡಿದಿರಾ? ಅಂತ ಪರಮ್ಶೇಶ್ವರಯ್ಯ ಮೂಕಮ್ಮನ್ನ ಕೇಳಿದರು.

ಮೂಕಮ್ಮಾ–ಗೋರ್ನಳ್ಳಿ ಮನೆ ಅಡಿಗೆ ಯಾಕೆ.

“ಲೇ ಗುತ್ತೀ, ಚಿಕ್ಕ ಸಾವುಕಾರ್ರು ಗೋಪಾಲಕೃಷ್ಣಯ್ಯ ಆ ಕಟ್ಟೇತಾವಿದ್ರೆ– ದೊಡ್ಡಯ್ಯ ಕರೀತಾರೇಂತ ಕರ್ಕೊಂಡು ಬಾರೇ” ಅಂತ ಮೂಕಮ್ಮ – ಆಳು ಗುತ್ತೀಗೆ ಆಜ್ಞಾಪಿಸಿದರು.

ಚಿಕ್ಕ ಸಾವುಕಾರ್ರು ಗೋಪಾಲಕೃಷ್ಣಯ್ಯ – ಮೂತಿ ಒರಸ್ಕೊತ್ತಾ ಬಂದ್ರು.

“ಗೋಪಣ್ಣ – ಡಾಕ್ಟ್ರು ಬಂದಿದಾರೆ – ಹೊಟ್ಟೆ ತೋರ್ಸು” ಅಂದ್ರು ಶ್ಯಾಂಭಟ್ರು.

ಗೋಪಣ್ಣ – ಚಡ್ಡೀನ ಕೆಳಕ್ಕೆ ಮಾಡಿ ಷರ್ಟನ್ನ ಮೇಲಿಕ್ಕೆತ್ತಿ ಹೊಟ್ಟೆ ತೋರಿಸಿದ.

“ಮಲಕ್ಕೋಪ್ಪಾ” ಅಂದೆ.

ಮಲಗಿದ. ಹೊಟ್ಟೆ ಮೇಲೆ ಕೈಯಾಡಿಸಿದೆ – ತೊಣಚಿ ಕೈಲಿ ಕಚ್ಚಿಸಿಕೊಂಡ ದನ ಹಾಗೆ ಮುಲ ಮುಲ ದನ್ದಾಡಿದ.

"ಪರಮೇಶ್ವರಯ್ಯ, ಗೋಪಣ್ಣನಿಗೆ ಯಾವಾಗ್ಲಾದ್ರೂ ಹೊಟ್ಟೆ ಹುಳು ಔಷಧಿ ಕೊಟ್ಟಿದ್ದೀರಾ ? ಅಂತ ಕೇಳಿದೆ.

"ಓಹೋ – ಒಂದು ಸಾರಿ ಶೇನ್ವಿ ಡಾಕ್ಟ್ರು ಕೊಟ್ಟಿದ್ರು" ಅಂದರು.

"ಎಷ್ಟು ದಿನಗಳಾಗಿರಬಹುದು ?" ಅಂತ ಕೇಳಿದೆ.

ಗೋರ್ನಳ್ಳಿ – ಒಂದು ಐದು ನಿಮಿಷ ಸಂಪೂರ್ಣ ಸ್ತಬ್ಧವಾಯ್ತು.

ಆಮೇಲೆ ಸಂಭಾಷಣಾ ಮಾಲೆ ಶುರುವಾಯ್ತು.

"ಚಿಕ್ಕಪ್ಪಾ – ನಮ್ಮನೇಗೆ ಸಾಲಿಗ್ರಾಮದ ಅಡಿಗರು ಬಂದದ್ದು ದುರ್ಗಾಷ್ಟಮಿಂ ಉತ್ಸವಕ್ಕಲ್ವೆ ? ಅಷ್ಟಾವಧಾನದಲ್ಲಿ ಹಾಡಿದರು – ಅಲ್ವೆ ?"

"ಹೌದೌದು – ಯಾವ ವರ್ಷ ಅದು ?"

"ನಮ್ಮ ಹೊಳೇಲಿ ನೆರೆ ಬಂದಿತ್ತಲ್ಲಾ—"

ದೊಡ್ಡ ನೆರೇನೋ ಸಣ್ಣ ನೆರೇನೋ ?"

ದೊಡ್ಡ ನೆರೇನೇ ಇರ್ಬೇಕು–ಯಾಕಂದ್ರೆ ಆ ವರ್ಷ ನಾವು ತೆಪ್ಪ ಕೂಡ್ಸೋ ಕಾಗ್ಲಿಲ್ಲ – ಹೊಳೆ ಈಚೆ ಮಂಟಪದಲ್ಲಿ ದೇವೀನ ಕೂಡಿಸಬೇಕಾಯ್ತು."

"ಹಾಗಾದ್ರೆ ಆ ವರ್ಷ ಬಂದಿದ್ದೋರು ಸಾಲಿಗ್ರಾಮದ ಅಡಿಗರಲ್ಲ. ಕೋಟೇಶ್ವರದಿಂದ ಐತಾಳರು ಬಂದಿದ್ರು – ಅವರ ಮನೆ ಅಂಗಳದಲ್ಲಿ ಹತ್ತಡಿ ನೀರು ನಿಂತಿದೆ ಅಂತ ಹೇಳಿದರಲ್ಲಾ – ಅವರೇ ವ್ಯಾಸರಾಯರ ಕೀರ್ತನೆ ಹಾಡಿದ್ದು."

"ಅಂದರೆ–ಅದು ಯಾವ ವರ್ಷ ?"

"ಭೋಜಸೆಟ್ಟಿ ಕೇಸಾಯ್ತಲ್ಲ–ಅವನು ನಮ್ಮ ಕೆಳಗಿನ ಮನೆ ಕೋಗಿನಲ್ಲಿ ಕಳ್ಳ ಭಟ್ಟಿ ಇಳಿಸ್ತಾನೆ ಅಂತ ದೀವರರಾಮು ಪೋಲೀಸು ದೂರು ಕೊಟ್ಟಿದ—"

"ಅಂದ್ರೆ ಮೂರು ವರ್ಷ ಆಗಿರಬೋದೆ ?"

"ಮೂರ್‍ಯಾಕೆ ? ನಾಲ್ಕೂ ಆಗಿರಬೇಕು–ಅದಾದ ಮೇಲೆ ತಾನೆ ದೀವರ ರಾಮನ ಮಗಳು ಭೋಜಸೆಟ್ಟಿ ತಮ್ಮನ ಜೊತೆ ಓಡಿಹೋಗಿದ್ದು ?"

"ದುಗ್ಗಿ ತಾನೆ ? ಅವಳು ಭೋಜಸೆಟ್ಟಿ ತಮ್ಮ ಮಂಜನ ಜೊತೆ ಹಂಪನ ಕಟ್ಟೇಲಿ ಬಂದು ಮಿಲಿಟ್ರಿ ಹೋಟ್ಲಲ್ಲಿ ಇಳ್ಕೊಂಡಿದ್ರು–ಸಿಕ್ಕಿಬಿದ್ರು. ಆ ಸಮಯ ದಲ್ಲಿ ದೀವರ ರಾಮನಿಗೆ–ಅವನ ಹೆಂಡ್ತಿ ಲಕ್ಕೀಗೆ ಹುಚ್ಚು ಹಿಡಿಯೋದೊಂದೇ ಬಾಕಿ—"

ಇಷ್ಟೆಲ್ಲಾ ಸಂಭಾಷಣೆ ಮಧ್ಯೆ ನಾನು ಮೌನವಾಗಿ ಕೂತಿದ್ದೆ. ಗೋಪಣ್ಣ ಎದ್ದು ಹೋಗಿ ಬುಗುರಿ ಆಡ್ತಾ ಇದ್ದ.

"ಪರಮೇಶ್ವರಯ್ಯ–ಗೋಪಣ್ಣನಿಗೆ ಹೊಟ್ಟೆಹುಳು ಔಷಧಿ ಹಿಂದೆ ಯಾವಾಗ ಕೊಟ್ಟಿದ್ರಿ ಅಂತ ತಿಳೀಲೆ ಇಲ್ವಲ್ಲ. ಅಂದೆ.

"ಅದೇ ಡಾಕ್ಟ್ರೇ ನಾವೂ ವಿಚಾರ ಮಾಡ್ತಾ ಇರೋದು. ಹೊಟ್ಟೆ ಹುಳು ಔಷಧಿ ತರೋಕೆ ಶೇನ್ವಿ ಡಾಕ್ಟರ್ ಜೊತೆ ಯಂಕ ಭಟ್ಟರು ಹೋಗಿದ್ರು. ದೀವರ ರಾಮನೂ, ಲಕ್ಕೀನೂ ಮಂಗಳೂರಿಗೆ ಹೋಗಿದ್ದೋರು, ಯಂಕ ಭಟ್ಟರ ಜೊತೇಲೇ ಬಂದ್ರು. ಅವರು ಹೋಗಿದ್ದಿದ್ದು ದುಗ್ಗೀನ ಕರ್ಕೊಂಡು ಬರೋಕೆ. ಅವಳು ಬರ್ಲೇ ಇಲ್ಲ—"

"ಸೋಮೇಶ್ವರದೂರಿಗೆ ಬಂದ್ಲಂತೆ. ಅಲ್ಲಿ ಪುನಃ ತಪ್ಪಿಸಿಕೊಂಡು ಪರಾರಿ ಯಾದ್ಲಂತೆ" ಅಂತ ಶ್ಯಾಂಭಟ್ಟರು ತಿದ್ದಿದರು.

"ಹೌದೌದು–ನಾನು ಮರೆತಿದ್ದೆ. ದುಗ್ಗಿ ಪುನಃ ಸೋಮೇಶ್ವರದಿಂದ ಪರಾರಿ ಯಾದ್ಲು ನಿಜ, ಅದೇ ವರ್ಷವೇ ನಮ್ಮ ಹೋಳೀಲಿ ನೆರೆ ಬಂದು ತೆಪ್ಪಕೂಡ್ಸೋ ಕಾಗ್ಲಿಲ್ಲ. ಆ ವರ್ಷ ಕೋಟೇಶ್ವರದ ಐತಾಳರು ನಮ್ಮಲ್ಲಿಗೆ ಬಂದಿದ್ರು–ದುರ್ಗಾ ಷ್ಟಮಿ ಉತ್ಸವಕ್ಕೆ ಅವರು ನೆಶ್ಯಡ್ಡಬ್ಬಿ ಇಟ್ಟ ಜಾಗದಲ್ಲಿ ಒಂದು ಪಟ್ಣ ಸಿಗ್ತು, ಅದೇನು–ಅಂತ ವಿಚಾರಿಸಿದ್ದಕ್ಕೆ–ವೆಂಕಭಟ್ರು–ಅದೇ ಗೋಪಾಲಕೃಷ್ಣಯ್ಯನ ಹೊಟ್ಟೆ ಹುಳು ಔಷಧ–ಶೇನ್ವಿ ಡಾಕ್ಟರು ಕೊಟ್ಟಿದ್ದು–ಅಂತ ಹೇಳಿದರು.

"ಹಾಗಾದ್ರೆ, ಗೋಪಣ್ಣನಿಗೆ ಹೊಟ್ಟೆ ಹುಳು ಔಷಧಿ ಕೊಟ್ರೆ–ತಾನೆ ?" ಅಂತ ಕುತೂಹಲದಿಂದ ಕೇಳಿದೆ.

"ತಾಳಿ–ಮೂಕವ್ಮ್ರನ್ನ ಕೇಳ್ಕೊಂಡು ಬರ್ತೇನೆ–" ಅಂತ ಪರಮೇಶ್ವರಯ್ಯ ಮನೆಯೊಳಕ್ಕೆ ಹೋದರು.

[ಈ ಪ್ರಸಂಗವನ್ನು ಇಷ್ಟಕ್ಕೆ ಮುಗಿಸಿದ್ದೇವೆ. ಪೂರ್ತಿ ಪ್ರಸಂಗವನ್ನು ನಾವೂ ಓದಿಲ್ಲ. ಗೋಪಣ್ಣ–ಹೊಟ್ಟೆ ಹುಳು ಔಷಧಿ ತಕೊಂಡನೆ ?–ಅಂತ ಖಚಿತ ವಾಗಿ ತಿಳಿದ ಮೇಲೆ ಸ್ಥಳಾನುಕೂಲ ಪ್ರಕಟಸುತ್ತೇವೆ : ಸಂ.]



ಸೀಟ್‌ಗೇ ತಾಪತ್ರಯಾರೀ ! ಈಗ್ಲೇ ಎರಡು ಸೀಟ್ ಬುಕ್ ಮಾಡೋಣ ಅಂತೆ ಬಂದೆ !



ಯಾಕೆ ಗೊಣಗ್ತೀಯೆ ! ಕಡಿಮೆ ಬಳಕೆಯಿಂದ ಎಷ್ಟು ದುಡ್ಡು ಉಳಿತಾಯ ನೋಡು !

ಬಡ್ಪಾಯಿ ಬೊರಣ್ಣನ್ ಕತೆ

— ಇ. ಡಿ. ನರಹರಿ

ಯೋಳ್ತೀನಿ ಕೇಳ್ರಪ್ಪೊ ನಮ್ಮೂರಿನ್ ಕತೆಯ
ನಮ್ಮಳ್ಳೀ ಬಡ್ಪಾಯಿ ಬೊರಣ್ಣನ್ ಇಸ್ಯ

ನಮ್ಮಳ್ಳೀ ಅಂಚ್ನಾಗೆ, ಕತ್ಲಾಗಿನ್ ಮಿಂಚ್ನಾಗೆ
ಕುಂತೈತೆ ನಮ್ಮೂರಿನ್ ರೇಲ್ವೆ ಟೇಸನ್ನು

ಟೇಸನ್ನಿನ್ ಅತ್ಲಾಗೆ, ರೇಲ್ ಕಂಬೀ ಮಗ್ಲಾಗೆ
ನಿಂತೈತೆ ಬೋರಣ್ಣನ್ ಬಾಮ್ಯದನ್ ಗುಡ್ಲು

ಬೋರಣ್ಣನ್ ಗರ್ತಿ ಬೋರಿ ಒಂದ್ಸರ್ತಿ
ಸಂಕ್ರಾಂತೀ ರಾತ್ರೀಗೆ ತೌರ್ ಕಡೇ ಒಂಟ್ಳು

ಮರ್ದಿನ ಮುಂಜಾನೆ, ಬೋರಣ್ಣ ಹೊಂಟಾನೆ
ಬಿರ್‌ಬಿರ್‌ನೆ ಬೋರಿ ತಾವ್ ಪಿಸ್‌ಗುಟ್ ಬರಾಕೆ

ದಾರೀನಾಗ್ ಅಡ್‌ಬಿತ್ತು ನಮ್ಮಳ್ಳೀ ಟೇಸನ್ನು
ಬೋರಣ್ಣಂಗ್ ಬೋ ಭಯ ರೇಲ್ ಬಂಡಿ ಕಂಡ್ರೆ

ಟೇಸನ್ನಿನ್ ಒಳೀಕ್ಕೆ, ಮುರಕಲ್ ಕುರ್ಚಿ ಮ್ಯಾಲೆ
ಕುಂತಿದ್ದ ಆ ವಯ್ಯ ಪರಚ್ಕೊತಾ ಮೈ ಕೈಯ

"ಅಡ್ಬುದ್ದೆ ಒಡ್ಯಾ" ಅಂತಂದ ನಂ ಬೋರ
"ಏನಿಸ್ಯಾ ಷಡೆಯಾ?" ಅಂತಾಬಿರ್ದ್ದಾವಯ್ಯ


"ಮದ್ದೂರಿನ್ ಬಂಡೀ ಏಸೊತ್ತಿಗ್ ಬುದಿ?"
"ಈ ಪಾಟಿ ಒತ್ತಾರೇಗ್ ಬಂಡಿ ಎಲ್ಬಂತೊ?"

"ಚನ್ನಪಟ್ಣದ್ಕೈಬಂಡಿ? ಆದ್ಯಾವಾಗ್ ನನ್ನೊಡ್ಯಾ?
"ಮದ್ರಾತೀ ಮಬ್ನಾಗೆ ಬಾ ಓಗೊ ಮಡ್ಯಾ"

" ...."

"ಅಲ್ಕಣ್ಲೇ ಬೋರಾ? ಅದಲ್ಲೋಗ್ಬೇಕ್ ಬೊಗ್ಳ್"

"ರೇಲ್ ಕಂಬೀ ಆ ಚೋರಿ. ನಂ ಬೋರಿ ತೌರು
ಆ ಕಂಬಿ ಆಸಿ, ಓಗ್ಬರೋ ಆಸೆ, ಹೆ.ಹೆ, ದೇವ್ರು"



ಮೂರ್ಖ ! ತೆಲುಗುದಿಂದ ಕದ್ದದ್ದು ಅಂತ ಬರೆದಿದ್ದೀಯಲ್ಲಾ !
ಮಲೆಯಳಂ ಸಿನಿಮಾದಿಂದ ಕದ್ದ ಕಥೆಗೆ ! !

ಶುಭಾಶಯಗಳೊಂದಿಗೆ

ದೂರವಾಣಿ : 353346/385814

ರೋನಿತ ಅಂಡ್ ಕಂಪನಿ

315, ಗುರುಸಿದ್ಧ ಕೃಪ, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು-560 086

ವಿತರಕರು : "ಜೆನಿಸಿಸ್" ಟೆಲಿಫೋನ್ ಉಪಕರಣಗಳು
"ಪೈಲೆಟ್" ಎಮರ್ಜೆನ್ಸಿ ಲೈಟುಗಳು
"ಇಂಪಾಲ" ಇಂಟರ್ ಕಾಂಗಳು

ಶುಭಾಶಯಗಳೊಂದಿಗೆ

ಜಯಂತಿ ಪವರ್ ಪ್ರೆಸ್

ಬೆ ೦ ಗ ಳೂ ರು.

ಶುಭಾಶಯಗಳೊಂದಿಗೆ

ಸುರೇಶ್ ಮಲ್ಹಾನಿ ಅಂಡ್ ಕಂಪನಿ

"ಇಂಡಸ್ಟ್ರಿ ಹೌಸ್"

ನಂ. 35, ರೇಸ್ ಕೋರ್ಸ್ ರಸ್ತೆ : : ಬೆಂಗಳೂರು_560 001


ಶುಭಾಶಯಗಳೊಂದಿಗೆ

ಮಹಾವೀರ್ ಪೇಪರ್ ಮಾರ್ಟ್

MAHAVEER PAPER MART

229/3, ಸುಲ್ತಾನ್‌ಪೇಟೆ, ಬೆಂಗಳೂರು-560 053

229/3, SULTANPET, BANGALORE–560 053




ಪೇಪರ್, ಬೋರ್ಡ್ ಮತ್ತು ಸ್ಟೇಷನರಿ ವ್ಯಾಪಾರಿಗಳು

(Dealers in Paper, Board & Stationery)

ನಮ್ಮಲ್ಲಿ ಸದಾಃಕಾಲವಲ್ಲೂ ಗುಜರಾತಿ ಹಾಗೂ ಮಾರವಾಡಿ
ಲೆಕ್ಕ ಪುಸ್ತಕಗಳು ದೊರೆಯುತ್ತದೆ.

(Gujarathi & Marvadi Account Books are always available with us)

—:ಶುಭಾಶಯಗಳೊಂದಿಗೆ:—



ದಿ ಸಂಡೂರ್ ಮ್ಯಾಂಗನೀಸ್ ಅಂಡ್
ಐರ್ನ್ ಓರ್ಸ್ ಲಿಮಿಟೆಡ್

ರಿಜಿಸ್ಟರ್ಡ್ ಮತ್ತು ಕಾರ್ಯ ನಿರ್ವಾಹಕ ಕಛೇರಿ :

"ಲೋಹಾದ್ರಿ ಭವನ"

ಯಶವಂತ ನಗರ್–583 124 ಸಂಡೂರ್ ಮಾರ್ಗ (ಬಳ್ಳಾರಿ ಡಿಸ್ಟ್ರಿಕ್ಟ್)

ಕರ್ನಾಟಕ